Kuśalavara-
Kāḷaga

1870

THE

KUSHALAVARA KALAGA.

ಪಂಚವಟ ರಾಮಾಯಣದ

ಉತ್ತರ ಕಾಂಡದೊಳಗಣ

ಕುಶಲವರ ಕಾಳಗ.

ಯಕ್ಷಗಾನ.

ಹೊಳಕಲ್ಲು ನರಸಿಂಹಯ್ಯನವರಿಂದ
ಪರಿಷ್ಕರಿಸಲ್ಪಟ್ಟಿಧೆ.

(Frist Edition. ೧ನೇ ಛಾಪೆ.)

ಬೆಂಗಳೂರು.

ಹೊಳೆಕಲ್ಲು ನರಸಿಂಹಯ್ಯನವರ
ವಿಚಾರ ದರ್ಪಣ ಮುದ್ರಾಕ್ಷರ ಶಾಲೆಯಲ್ಲಿ
ಮುದ್ರಿಸಲ್ಪಟ್ಟು ಪ್ರಕಟಸಲ್ಪಟ್ಟಿತು.

ಸನ್ ೧೮೭೦.

1870.

1

THE

KUSHALAVARA KAḶAGA.

ಕುಶಲವರ ಕಾಳಗ.

ಯಕ್ಷಗಾನ.

ರಾಗ ನಾಟಿ. ಜಂಪೆ ತಾಳ.

ಭಜಿಸುವೆ ಮನದಲಿ ನಿತ್ಯವು | ಭಜಕರಿಗೆ ಲದೈವ ಸುರವ್ರಜ ಸೇವಿತನೆಂದೆನಿಸುವ | ಗಜವದನನ ಪದವಾ ಭಜಿಸುವೆ ||ಪಲ್ಲವಿ|| ಭಾಸುರಮಣಿಗಣರತ್ನವಿ | ಭೂಷಣಲಂಬೋದರವಿಘ್ನೇಶವಿನಾಯಕಸುಜನರ ಪೋಷಣನೆಂದೆನಿಪಾ || ಏಸು ಮಹಿಮೆಯುಂಟೆಂಬುದ ನಾ ಸರಸಿಜಭವನರಿವನು | ಜೀಸರದೆಲ್ಲರರಕ್ಷಿಪಮೂಷಕವಾಹನನೆ ||೧|| ಗೌರಿಯನೋಹದಪುತ್ರನೆಗಣನಾಯಕನು | ಚರಿತ್ರನೆಪವುರುಷಮದ ಭಂಗನಪರತರ ಪಾವನನಾ | ಬಹುವಿಧಮಾನವಮೂರ್ತಿಯಬಹುಲೋಕದೊಳತ್ರಿಕೀರ್ತಿಯ ಚವುವೇದಶ್ರುತಿಸಾರನ ಪಾಶಾಂಕುಶ ಧರನಾ||೨|| ಮದುವೆ ಯುಮುಂಜಿಯು ಶುಭಲಗ್ನದ ಕಾರ್ಯಾಗಲು ಮೊದಲಿನಪೂಜೆಯುಗೊಂಬುದುಅದುನಿನ್ನಾಬಿರಿದೂ| ಅದರಿಂರಚಿಸಿದಕಾರ್ಯದಮೊದಲಿಗೆನಾಪ್ರಾರ್ಥಿಶಿದೆನುಮಧುಪುರಗಣನಾಯಕನಿನ್ನ ಸದನಕೆನಃಸೊಯಿಂಬೇ|| ಜಯ ಜಯಾ ೨

ದ್ವಿ. ಗಜಮುಖಗೆ ತಲವಾಗಿ ಗೌರಿಗೆ ವಂದಿಸುತಾ। ಅಜನರಸಿ ಶಾರದೆಗೆ ಅರಿತು ಮಣಿಸುತಾ। ಶಂಕರಾಚಾರ್ಯರಿಗೆ ಶರಣೆಂಬೆ ಬಳಿಕಾ। ಮಾರ್ಕಂಡೆಗುರು ಪದವದಯುಮಾಡುವನಕಾ। ಪರಶಿವಗೆ ಕೈಮುಗಿದು ಪಾರ್ವತಿಗೆ ನಮಿಶಿ ಶಿರಿದೇವಿಯರಸನನು ಶೀಘ್ರದಿಂ ಭಜಿಸಿ। ವಾಲ್ಮೀಕಿಮುನಿಪತಿಗೆ ವಂದನೆಯ ಮಾಡಿ। ನಾಲ್ಮೆಯಿಂ ಸಕಲಸುರರೊಳು ಮತಿಯ ಬೇಡಿ। ರಾಮಾಯಣದೊಳು ಕುಶಲವರ ಕಾಳಗವ। ಭೂಮಿಯೊಳು ಪೇಳ್ವ ಬಹುವಿಧ ಪರಾಕ್ರಮವ ಬಾಲಕರನುಡಿಯಂದು ಬರೆದೆ ನಿಂದಿಸದೆ। ಕೇಳಿ ಸಂತೋಷಿಸುವ ಸುಜನರೆಲ್ಲರಿಗೆ

ವ. ಈ ರೀತಿಯಿಂ ಸಕಲ ಗುರು ದೇವತೆಯರಂ ಪ್ರಾರ್ಥಿಸಿಕೊಂಡು ತತ್ಕಥಾ ಪ್ರಸಂಗಮಂ ಪೇಳ್ವೆನದೆಂತೆನೆ

ರಾಗ ಸೌರಾಷ್ಟ್ರ. ತ್ರಿವುಡೆತಾಳ.

ಧಾರುಣಿಪ ಜನಮೇಜಯಂಗಾ। ಚಾರುವೈಶಂಪಾಯ ಮುನಿಪತಿ। ಭಾರತವ ಪೇಳ್ತಿರಲು ಬಹುವಿಸ್ತಾರದಿಂದಾ ಪಲ್ಲವಿ॥ ತಂದೆ ಮಕ್ಕಳು ತಾವು ತಮ್ಮೊಳು। ಒಂದುಮತವಾಗಿರದೆ ರಣದೊಳು। ನಿಂದು ಕಾದುವರುಂಟೆ ಪೇಳೆನಗೆಂದ ಭೂಪಾ ॥೧॥ ಆಗ ಮುನಿ ಕರುಣಿಸಿದ ಕುಶಲವ। ರಾಘವನ ಸಂಗರದ ಕಥೆಯನು। ಯಾಗಭೂಮಿಯೊಳೊರವೆ ಯಕ್ಷಗಾನದಿಂದಾ ॥೨॥ ಧರೆಯೊಳುತ್ತಮವೆನಿಪ ಯೋಧ್ಯ। ಪುರವನಾಳುವ ರಾಮಚಂದ್ರನು। ಪೊರಟು ಕೈಕಾದೇವಿಗೋಸುಗ ವನಕೆ ಬಂದೂ ॥ 3 ॥ ದುರುಳ ಖರದೂಷಣರ ಕೊಂದ। ಲ್ಲಿರದೆ ಸೀತೆಯನೊಯ್ಯೆ ರಾವಣ। ಕರದಿ ಕಪಿಗಳನೆರಹಿ ಶರಧಿಗೆ ಸೇತು ಕಟ್ಟೀ ॥೪॥ ಹತ್ತುಶಿರದನ ಪ

ಡೆಯುಸಹಿತಲೆ | ಕತ್ತರಿಸಿದನುಕುಂಭಕರ್ಣನು | ಮತ್ತೆ ಜಾನಕಿಸಹಿತಪುರವನಾಳುತ್ತಿರಲೂ ... ೫

ವಾ. ರಾವಣಾದಿಗಳಸಂಹರಿಸಿಶೆರೆಯೊಳಗೀರ್ದ | ದೇವರ್ಕಳಂಬಿಡಿಸಿಲಂಕಾಧಿಪತ್ಯಮಂ | ತೀವಿದತ್ರಿಸಂಭ್ರಮದೊಳಾವಿಭೀಷಣಗಿತ್ತುಸುಗ್ರೀವನಂಮಂನಿಶೀ || ಭಾವಶುದ್ಧಿಯೊಳಯೋಧ್ಯಾಪುರಕೆನಡೆತಂದು | ಭೂವರಂತಾನಾಗಿಪಾಲಿಸಿದರಾಜ್ಯಮಂ | ಕೋವಿದರಸನುಮಂದುದಿನಚಿಂತೆಯಿಂದಿರಲುಕಂಡುಜಾನಕಿನುಡಿದಳೂ

ರಾಗ ವಸಂತ. ಜಂಪೆತಾಳ.

ಕಾಂತಾಶಿರೋಮಣಿಯೆರಾಮಜಗಧೀಶಾ | ಚಿಂತಿಸುವಬಗೆಯೇನುಚಿನುಮಯನೆನೀನೂ || ನಾರಿಕುಲಮಣಿಕೇಳುಯೆಂನಿಂದ | ಮೇಲಿನ್ನುವುತ್ರರ್ಗಿಲ್ಲದೆಯಾಕೂಅಂತಕನಾನಾದೇ

ವಾ. ವಿಹಾರಿರ್ದಕಾಸಾರಕರವಿಂದವಿಲ್ಲದಿರೆ | ತಾರಕಿಗಳೀರ್ದಗಗನಕೆಚಂದ್ರನಿಲ್ಲದಿರೆ | ಚಾರುಯವ್ವನವಿರ್ದ ಪೆಣ್ಗೆನಯನಿಲ್ಲದಿರೆಸನ್ನುತಾಪ್ರಜೆಗಳಿರ್ದೂ || ಧಾರುಣಿಗೆಧರ್ಮದರಶಿಲ್ಲದಿರೆಕ್ಷಿರಿಯಿರ್ದು | ದಾರವಂಶಕೆಕುವರನಿಲ್ಲದಿರೆಮೆರೆದಪುದೆ|ನಾರಿಪೇಳ್ವೆನೆಲಜ್ಜೆಯಿಂದತಲೆವಾಗಿನಿಜಪತಿಗೆಜಾನಕಿನುಡಿದಳೂ

ರಾಗ ವಸಂತ. ಜಂಪೆತಾಳ.

ಪೂರ್ವ ಜನ್ಮದಲಿ ಶಿವಪೂಜೆಯನುಮಾಡಿದರೆ | ಸರ್ವಥಾಮಕ್ಕಳೆನಗಾಗದೇನೈಯಾ

ವಾ. ಕಾಂತೆಕೇಳಿಂನ್ಯಾತಕಾಮಾತನಾಡಿದರೆ | ಭ್ರಾಂತು ಯಂಬರು ಕೇಳ್ದಜನರುಗಳ್ ಪೂರ್ವ ಜ

ನಾನ್ಹಿಂತರದಸುಕೃತವಲ್ಲದೆಡೆ ಬಯಸಲು ಮಕ್ಕಳಾಗು
ವದೆ ಮನುಜರಿಂಗೆ ॥ ಯಿಂತು ಸುತರಿಲ್ಲದಾಸೆಯೊಳಿ
ಲುಮನದೊಳಗೆ । ಚಿಂತಿಸುವ ಸಮಯದಿ ವಸಿಷ್ಠಮುನಿಪ
ತಿ ಬಂದು । ನಿಂತಿರಲು ರಾಮನುಪಚಾರಂಗಳಂ ವೆಸಗಿಸಾ
ಷ್ಟಾಂಗವಂದಿಸಿದನೂ

ರಾಗ ಕೇತಾರಗೌಳ. ಜಂಪೆತಾಳ.

ಜಯಜಯಮ ಹಾ ಮುನಿಋಷಿಕುಲ ಶಿಖಾಮಣೀ
ಸ್ಮರಿಸಿದು ಸಫಲ । ವಾಯ್ತು ವಪಾದದರುಶನದಿ ಬಲುಕೃ
ಯೊಳೈತಂದಾ ಕಾರ್ಯವೇನೆಂದಾ ॥೧॥ ಸಕಲಸುರಸೇ
ಶತ್ರಿ ಕರಣವಿರಾಜಿತ । ಮುಕುತಿದಾಯಕ ದೇವಋಷಿಕ
ತುಶೀಲಾ ರಾಗ ಶಂಕರಾಭರಣ ಅಟತಾಳ.

ರಾಮರಾಮ ಯಿಕ್ಷ್ವಾಕುಲಸೋಮಭೂಮಿಪಾಲಾ
ಪಾಹಿ । ಭೀಮವಿಕ್ರಮಾಸು ಪುಣ್ಯನಾಮಮಾಂಪಾಹಿ ಮಾ
ಅರಿತೆ ನಿನ್ನಂತರಂಗಳಿಗಲಿಲ್ಲಮಕ್ಕಳೆಂಬ । ಕೊರತೇ ಯ
ಕಳೆಯಲೆಂದು ಬಂದೆನಾ ನಿಂದೂ

ರಾಗ ವಸಂತಜಂಪೆ.

ಮುಂದೇನುಪಾಯ ಮುನಿ ಮಕ್ಕಳಾಗುವದಕ್ಕೆ । ತ
ದೆ ಮುನಿಪತಿ ಯೆನಗೆ ತಿಳುಹಬೇಕೈಯಾ ॥೧॥ ಜಾನಕಿಯ
ಕರದು ಮುನಿ ಮಂತ್ರೋಪದೇಶವನು । ತಾನೊಂದು ಕೊ
ಡಿಶಿದನು ಮಕ್ಕಳಾಗುವರೆ ॥೨॥ ಮುನಿರಾಯ ಕೇಳೈಯ
ಜನಿಸುವರು ಸುತ । ರೆನಗೆ ತರಳರೊ ತರಳೆಯೊ ರೊಯ
ಷ್ಟಾಸರ್ರೈಯ ರಾಗ ಶಂಕರಾಭರಣ. ಅಟತಾಳ.

ನಿರ್ಭಯದೊಳಿರು ನೀನು ನಿನ್ನರಶಿ ಜಾನಕಿಗೆ। ಯಿಬ್ಬ
ರುದಿಸೂವರೈಯ ಯಿಸಾರಿ ನೋಡೂ

ಭಾ. ಮುನಿಪಸಾಡಿದಮಾತಕೇಳುತ । ಮನಸಿನಲಿಸಂತೋಷವಾಯ್ತು ।ಜನಪನನುಬೀಳ್ಕೊಂಡುಋಷಿತಂನಾಶ್ರಮಕೆತೆರಳೇ ॥ ದಿನವಕಳಿದರುಬಳಿಕರಾಜ್ಯವ। ನನುಕರಿಶಿಪಾಲಿಸುತಯೋಧ್ಯದ। ಜನರುಸುಖಿತರಾದರಾಘವನಾಳ್ವಕಾಲದಲೀ

ರಾಗ ಭೈರವಿ. ಜಂಪೆತಾಳ.

ಸಕಲಭಾಗ್ಯಗಳಿರಲುಸರ್ವಜನಶುಭಕರವು । ಸುಕೃತಿಮಂಗಳಕರವುಸಾಕೇತಪುರವು ॥೧॥ ನಾಕಾಧಿಪನಭೋಗಯನಗೆತನಗೆಂಬರಾಗ । ಬೇಕೆಂಬಜನರಿಲ್ಲಯಾಚಕರೊಳಂದೂ ॥೨॥ ಬೇಡುವರನಾಕಾಣೆಬೇಕೆಂಬಜನರೆಲ್ಲ। ಬೀಡುಬಿಟ್ಟಳುಲಕ್ಷ್ಮಿಪೋಡಿತುದರಿದ್ರಾ 3

ವ. ಯಿಂತುಸಕಲಸಾಭಾಗ್ಯದಿಂರಂಜಿಸುವಂತಾಅಯೋಧ್ಯಪಟ್ಟಣಕ್ಕೆವಸಂತನೈತಂದನದೆಂತೆನೇ

ರಾಗ ಸೌರಾಷ್ಟ್ರ. ತ್ರಿಪುಡತಾಳ.

ಚಿಗುರಿದವುವನದೊಳಗೆತರುಗಳು। ಮುಗುಳುನಾಂತವುಪುಷ್ಪಲತೆಗಳು । ಬಗೆಬಗೆಯಫಲನಿಕರಪಂಣುಗಳಾಯಿತಾಗಾ ॥೧॥ ತುಂಬಿಗಳಝೇಂಕಾರಹೆಚ್ಚಿತು । ಅಂಬುಜದಯೆಡೆಬಿರಿಯೆಚ್ಚಿತು। ಅಂಬರದೊಳಾಡುವವುಗಿಣಿಗಳು ಸಂಭ್ರಮದೊಳೂ॥೨॥ ಅಗಿಲುಚಂದನಜಾಜಿಮಲ್ಲಿಗೆಮಂದಮಾರುತಬೀಸೆರಾಜ್ಯದಿ। ಮಗಮಗಿಪಪರಿಮಳಗಳೆಸೆಯಿತುನಾಲ್ಕುಕಡೆಯೂ 3

ವ. ಆ ವೇಳೆಯಲ್ಲಿ ವನಪಾಲಕ ನೋರ್ವನೈ ತಂದುರಾಘವೇಶ್ವರ ನೊಡನೆಕರವಮುಗಿದುಯೆಂದನುಯೆಂದರೇ

ರಾಗ ಶಂಕರಾಭರಣ. ಮಟ್ಟತಾಳೆ.

ರಾಮ ರಾಘವಾ ರಾಜೀವಲೋಚನಾ । ಭೂಮಿಪಾಲ ಕಾಭಕ್ತವತ್ಸಲಾ ॥೧॥ ಸುಗುಣ ತರುಗಳೂಯಲ್ಲಾ ಚಿಗುರಿವನ ದೊಳೂ । ಬಗೆಬಗೆಯ ಪಲಗಳೂಯಲ್ಲಾ ಕಾನನ ದೊಳೂ ॥೨॥ ಕಾಡಮೃಗಗಳು ಯಲ್ಲ । ಕೂಡಿವನ ದೊಳೂ ಆಡುತಲ್ಲಿವೇ ಅಂಜಿಕಿಲ್ಲದೇ 3

ದ್ವಿ. ರಘುರಾಮ ರಾಜಸುಗುಣಸ ಅಮಜಾ ಬಿಂನೆಪವಕೇಳು ಮನ್ನಿಸುದ ಯಾಳೂ ನಾಡುಯಲ್ಲಾ ಯಿನಿತು ಧಾಮಧೂಮಾಯ್ತು । ಖಗಮೃಗಗಳುಬಂದುವಿಂಗೆ ಫಲವತಿಂದೂ ಪಿರಿದೆಂಮು ದುಃಖ ಅರಮನೆಯ ರೊಕ್ಕ ಹಾಗೆತೆರಬೇಕು ಹೀಗಾಯ್ತು ಬದುಕು

ರಾಗ ಭೈರವಿ. ಜಂಪೆ.

ಆಡಬೇಕು ಬೇಟೆಯನ್ನು । ಗಾಡಡಿನಾವೆಲ್ಲರನ್ನು । ನಾಡುಜನರುರೆಲ್ಲ ಪಂಚೆ । ಪಾಡುಮಾಡಿತೆಂಬನಾರ್ತ । ಗಾಡಿಕರನುಬಂದುಬಂದುಪೇಳ್ವನು

ದ್ವಿ. ರಾಘವಪರಾಕುಚಿತ್ತೈಸುಬಿನ್ನಪವಾ ರೂಢಿಯೊಳಗೀಗಯಂಮುಯಪರಾಕ್ರಮವಾ ಆಡುವೆವುಬೇಟೆ ಈಡಾಡುವೆವುಮೃಗವಾ ಗಾಡದಿಂದೀಕ್ಷಿಸೆಂಮುಯಪರಾಕ್ರಮವಾ ಈವಿಷಯದಲ್ಲಿಜಾಪ್ಯವನುಮಾಡಿದರೇ ನಾವಿದರ್ದಾಕ್ಯಕೆದೇವರಪದಾಂಬುಜಕೆ

ವ. ಆಗಲಾ ಗಜ ರಥ ಪದಾತಿಗಳೆಂಬ ಚತುರಂಗ ಸೈನ್ಯವಂ ಕೂಡಿಕೊಂಡು ರಾಘವೇಶ್ವರನು ವನಕ್ಕೆ ತೆರಳಿದನದೆಂತನೆ ಮದ್ಯಮಾವತಿ ಆದಿತಾಳ.

ಬೇಟೆಯಾಡುತ್ತಬಂದಾ ರಾಮಾ ಸಂತೋಷದಿಂದಾ

ಬೇಟೆಯಾಡುತ್ತಬಂದರಾಮಾ ‖ಪ‖ ಈಟಕಠಾರಿಯು ಕೋಟವಂದಿನೆಗ। ದಾಟವನಾಡು ತನಾಟಕಧಾರಿ‖ ಬೇಟೆಯಾಡು ತಬಂದರಾಮಾ ‖೧‖ ಸೊಕ್ಕಿದಮೃಗಗಳ। ಧಿಕ್ಕರಿಸು ತಲಿರೆಚಿಕ್ಕರದಿಂದಲಿ। ರಕ್ಕಸವೈರಿಬೇಟೆ ೨ ನಾನಾವಿಧಪರಿಫಲಗಳಕೊಯು ತ। ಕಾನನದೊಳಗಾಜಾನಕಿಸಹಿತಾಬೇಟೆಯಾಡುತ್ತಬಂದರಾಮಾ ‖೩‖ ಪುಷ್ಪದಿರಚಿಸಿದಚಪ್ಪರನುಂಚದಿ। ವಪ್ಪುವಸೀತೆಕಂದರ್ಪನಜನಕಾಬೇಟೆಯಾಡುತ್ತಬಂದರಾಮಾ ೪

ವ. ಇಂತು ಮೂರು ನಾಲ್ಕು ದಿವಸ ಬೇಟೆಯಾಡುತ್ತಿರಲು ಯೇನಾಯಿತು ಯಂದರೆ

ರಾಗ ಮುಖಾರಿ. ಆದಿತಾಳ.

ಮತ್ತವಂತೆಪುಷ್ಪವತಿಯಾದಳುಸೀತೆ। ಪತಿಯಕೂಟದಿಜತೆಯೊಳಿರೆವೃಪ। ರತಿಯವೇಳ್ಯದಿಮಾನುನೀ ೧ ಮಲ್ಲಿಕಾಶ್ರಿತೆಮಧುರಕೋಕಿಲಗಾನೆ। ಪುಲ್ಲಲೋಚನೆಸಲ್ಲಲಿತವನದಲ್ಲಿಮಾನುನಿಜಾನಕೀ ‖೨‖ ಅಂಬುಜಾನನೆಅರಸಂಚೆಗಮನೆ। ರಂಭೆಪುತ್ಥಳಿಬೊಂಬೆಯಿಂಸೇನೆಂಬೆಶೃಂಗರದಂಗನೆ ೩

ರಾಗ ಭೈರವಿ. ಯೆಕತಾಳ.

ಜನಕಾನಂದನೆಯಿಂತುದೂರನಿಂದಿಹಳ್ಯಾಕೆತ್ತಿಳಿದುಬಾಯೆಂದೆನುತಕಳುಹಿದಸಖಿಯ

ರಾಗ ಸೌರಾಷ್ಟ್ರ. ಅಟತಾಳ.

ಯೇನಾವ್ವತಾಯೆ ಯೇನಾವ್ವ। ಯೇನಾವ್ವತಾಯೆ ಈಮಧ್ಯರಾತ್ರೆಯೊಳು। ಮಾನುನಿಯೋರ್ವಳೆಸುಂಮಾನೆಕುಳುತೀಪರ್ದೇನವ್ವತಾಯೇ

ರಾಗ ರೇಗುಪ್ತಿ. ಅಟತಾಳ.

ಮುಟ್ಟದಿರು ಮುಟ್ಟದಿರು ಮುಟ್ಟಾದೆ ನಾನೂ। ಶ್ರಿಷ್ಟಿ ಗೀಶ ರಾಮನೊಳು ತಟ್ಟಾನೆನೀಸ್ಪೋಗಿಪೇಳೂ

ರಾಗ ಮದ್ಯಮಾವತಿ. ಯೆಕತಾಳ.

ಸೀತೆ ದೂರದಿನಿಂದ। ರೀತಿಯ ಕಂಡು ರಾಮ। ತಾತಿಳಿದನು ಮನದಿತಾತ ತುಕ್ಷಣದೀ ॥ಪ॥ ಚತುರಂಗಸೇನೆಯ ತಾತಿರುಗಿಸಿಕೊಂಡು। ಭೂತಳಾಧಿಪನು ಸಾಕೇತಪಟ್ಟಣಕೆ ॥೧॥ ಬಂದು ರಾಘವ ತನ್ನ। ಮಂದಿಗೀಳ್ಯವನಿತ್ತು ಚಂದಾದಿಕಳುಹಿದನಂದು ಮಾತಾಡಿ ॥೨॥ ಮಂದಗಾಮನೆಗಿಂತು। ಸಂದಾವುನಾಲ್ಕು ದಿನವಿಂದು। ಬಂದಳು ತನ್ನಾ ಮಂದೀರದೆಡೆಗೆ ॥೩॥ ಮಂದೀರವನು ಪೊಕ್ಕು। ಚಂದದಿಂ ರುತ್ತಿರೆ। ಸಂದು ಹೋದುದು ಮತ್ತೊಂದು ದಿವಸವು ೪

ರಾಗ ತೋಡಿ, ಅಟತಾಳ.

ಮದಗಜಗಮನೆ ಐದನೆ ದಿವಸಾದಿವಿಂದು। ಸದಮಾವಿಧದಲಂಕರಿಸುತ್ತ। ಸದನಕ್ಕೆ ಬರೆ ಕಂಡು ರಾಘವನು ಮಟ್ಟದರೆ ಗರ್ಭವನಾಂತುಳು ಸೀತೆ

ರಾಗ ಸಾಂಗಿತ್ಯ ರೂಪಕ ತಾಳ.

ಚಾರಿಚರಿತ್ರೆ ಚಂದಿರಮುಖಿ ಚಂದನಗಂಧಿ। ವಾರಿಜನೇತ್ರೆ ವಾಸವಸ್ತೋತ್ರೆ। ಮಿಾರಿದ ಗುರುನಿತಂಬಿನ ಸೋಬಗಿ ಸೋನೆ ಮಾರನ ಮುಂಗೈಯರಗಿಣಿಯು ॥೧॥ ಕಂನಾಡಿ ದಪುಕಂಗಳನೋಟದರ। ಳ್ಗೆಂಣಬಿಂನಾಣದಬಲೆ ಬಿಂಕದ ನಾರಿ ಮಂನಥನರಗಿಣಿ ಚೊಂಚೀಯ ಗರ್ಭಾದಿ। ಚಿಂನದ ತೆಸದು ರಂಜಿಸಿತು ॥೨॥ ಮೂರು ತಿಂಗಳು ತುಂಬಿ ಮು ದ್ದು। ಮೋರೆಯ ಬಿಳ್ಪೇರಿತು ಮೂಜಗದೊಡತಿಗೆ

ಶ್ರೀರಾಮನರಸಿಯಗುರುಕೂಡವರಡುಕಪ್ಪೇರಿತುಭಾಗ್ಯ
ಯುವಸಾತ್ರದೊಳೆ ೭

ರಾಗ ಕೇತಾರಗೌಳ ಅಟತಾಳ.

ಮಂಗಳಾಂಗಿಶ್ರೀತೆಗೆನಾಲ್ಕು | ತಿಂಗಳಾಗಲಾಗಲಾರಘು | ಶೃಂಗವಸಂತೋಷದಿಪುರಂಗಳೊಳೆಲ್ಲಾ ||೧|| ಶೃಂಗರೀಸಿ ಪಟ್ಟಣದೊ | ಳಂಗನೇಯರೆಲ್ಲ ಶೋಭಾ | ನಂಗಳಾಪಾಡುತ್ತಶ್ರೀಮಂತಂಗಳಾಮಾಡಿ ||೨|| ಅಶೇಳುತಿಂಗಳುತುಂಬಿ | ನಾರೀಸೀತಾದೇವಿಗಿಷ್ಟೆ | ಬೇರೆಬೇರೆ ತಂದುಕೊಟ್ಟರೂರಹೆಂಗಳೂ ||೩|| ಕೇರಿಕೇರಿಯಬಳಿಯ | ರಾರತಿಗಳನು ತಂದು ಶ್ರೀರಾಮಗೆಸೀತೆಗೆತ್ತಿತೆರಳಿದರಂದೂ ೩

ಕಂ. ನಯನುಡಿಯಿಂ ಮಾತಾಡುತ | ಬಯಸಿದುದೇನೆಂದುಕೇಳಲು ರಾಮಂ | ಭಯದಿಂದುಸುರಿದಳು ತಂ | ನಯಪ್ರಿಯನಿಗೆಕರವಮುಗಿದು ವುಸುರಿದಳಾಗಲ್

ರಾಗ ನಿಲಾಂಬರಿ ಜಂಪೆ.

ವಾರಿಜಾಂಬಕಾಧಾರುಣಿಪತ್ರಿ | ಮಾರಸಂನಿಭಾ ಮಂಜುಳಾಕರಾ ||೧|| ಕೇಳು ರಾಘವಾ ವನದಹೆಂಗಳಾ | ಮೇಳದಿಂದಲೀಯಿರುವೆನಲ್ಲಿಯೇ ||೨|| ಯಂದು ಬರುವೆಯೆಂ ಮಂದಗಾಮಿನೀ | ಯಂದು ರಾಘವನಂದು ಕೇಳಲೂ ||೩|| ಮೂರುದಿವಸದಾಮೇಲೆಬರುವೆನೂ | ಕಾರಣೀಕನೆಕಳುಹುತನ್ನನೂ ೪

ಭಾ. ಧರಣಿಜೆಯು ತನಗಿಷ್ಟೆಯಾದುದ | ನರುಹೆಕಳುಹುವೆನೆಂದುನಿಶ್ಚೈಸಿ | ಶಿಠಲುನಗರದಿತಿರುಗ ಬೇಕೆಂದಾಗನಡುಯಿರಳೂ || ಚರರಕಳುಹಿಸಿ ತಂನಸುದ್ದಿಯ | ಪುರದಜನರೇನೆಂಬರೆನಿವಿ | ಸ್ತುತಿಸಿದರು ಕೈಮುಗಿದು ನಗರದೊಳೊರವಾರ್ತೆಯನು

ರಾಗ ಭೈರವಿ ಜಂಪೆ.

ರಣಸರಾಕ್ರಮಧೀರಗುಣ ನಿಧಾನಕ ಶೋರ ಮಣಿಮ ಕುಟದೃತಹಾರಮಂಜುಳಾಕಾರಾ ॥೧॥ ಸತ್ಯಧರ್ಮವಿ ಚಾರಸಾಧುಜನಪರಿಪಾಲ। ನಿತ್ಯಮಂಗಳರೂಪನಿಜಸು ಪ್ರತಾಪಾ ॥೨॥ ಧರ್ಮದಾನಗಳಲ್ಲಿಧೈರ್ಯಮಾನಿಗಳಲ್ಲಿ। ನಿರ್ಮಲಾತ್ಮಕನೆಂದು ನಿಮ್ಮಪೊಗಳುವರೂ ೩

ರಾಗ ಕೇತಾರಗೌಳ ಅಟತಾಳ.

ಬಲ್ಲಿದವ ರಕುಲದೈವನೀನೆಂದುಪುರೆಲ್ಲಕೊಂಡಾಡು ವರೂ।ಖುಲ್ಲನಿ ಭಾರ್ಗ್ಯನಿಂದಿರುಳೋರ್ವ ರಜಕನಿಮ ಗಲ್ಲದನುಡಿಯಪೇಳ್ದ ॥೧॥ ತನ್ನೊಲ್ಲಭೆತವುರ್ಮನೆಗು ಸುರದೈದಿದಳೆಂದುಕೊಲ್ಲುತ್ತನವಳಬಿಡಲು। ಬಲ್ಲಿದರೊ ಡೆಂಬಡಿಸಾಲುರಾಮನಂತೆಹುಚ್ಚಲ್ಲಕೂಡಲಿಕೆಂದಾನೂ

ಭಾ. ನುಡಿಯಕೇಳು ತಕ್ಕೈಯಧನುಶರ। ಪೊಡವಿಗುರು ಳಿತುರೆಶೇಷಮಯದು।ಗ್ಗಡದರವುದ್ರಾವೇಶದಲಿಮುರಳಿ ದನುಮಂದಿರಕೇ॥ ಮಿಡುಕುತ್ತೀರ್ದನುಮನಶಿನಲಿಕಂ।ಗೆ ಡುತಕಂಣಿಗೆನಿದ್ರೆಬಾರದೆ। ಪೊಡವಿಪತಿರಘುನಾಥತಂ ನೊಳುಮಾತನಾಡಿದನೂ

ರಾಗ ಕಾಂಬೋದಿ, ಆದಿತಾಳ.

ಮೋಸವಾಯಿತುಮಾನಿನಿಯತಂದು। ಮೋಸವಾ ಯಿತು ॥ಪ॥ ರಕ್ಕಸಾರಕ್ಕೆಯೊಳಾಗೆ। ಶಿಕ್ಷಭಂಗಪಟ್ಟು ಅವ। ರಿಕ್ಕದುಂಣಿಲ್ಲವೆಂದು। ಲೆಕ್ಕಸಾದೆಮ ನೆಗೆತಂದೂ।ಮೋಸವಾಯ್ತು ॥೧॥ ಮಾನವರುಗಳನ್ನು ಕೊಂದುಮತ್ತೆಮಾಂಸಗಳನುತಿಂದು। ದಾನವಾರಕ್ಕೆ ಮುಟ್ಟೇದಮಾನಿನೀಯಮನೇಗೆ ತಂದೂ ॥೨॥ ಕದ್ದು

ಕೊಂಡುಪೋಗಿತನ್ನ। ಬಿದ್ದಣೇಗರೊಡನೆಕೂಡಿ। ಶುದ್ಧಾ ವೆರಕ್ಕಸರಪುರದೊ। ಳಿದ್ದಸೀತೆಯಮನೆಗೆತಂದೂ ೩

ವ. ಯಿಂತೆಂದು ರಾಮ ಚಂದ್ರ ದೇವರು ಹಲವು ಹಂಬಲಿಸುತ್ತ ರಾತ್ರೆಯಂಕಳಿದು ಮರುದಿವಸ ವುದಯ ದೊಳೆದ್ದು ಅನುಜನಾದ ಲಕ್ಷ್ಮಣನಂಕರದು ಯೇಕಾಂತ ದಿಂಯಿಂತೆಂದನೂ ರಾಗ ಮುಖಾರಿ. ಯೆಕತಾಳೆ.

ಬಾರೈಯತಂಮಾಕೇಳೆಂದನೂದೊಡ್ಡ ಘೋರಕಾ ನನದಲ್ಲಿ। ನಾರೀಜಾನಕಿಯಬಿಟ್ಟ । ಬಾರೈಯತಮ್ಮಾ ಕೇಳೆಂದನೂ ॥೧॥ ಅಡವೀಗೆಕರಕೊಂಡು ಪೋಗೈಯಾ ಯಿನ್ನು। ಬಿಡಲ್ಲಿಜನರಪವಾಧವಾ ಅಲ್ಲಿ। ಮಡದಿಯೊ ಬ್ಬಳಬಿಟ್ಟು। ಕಡೆಗೆಪೇಳುವೆಗುಟ್ಟು ॥೨॥ ತಡವಾ ಮಾಡುವದ್ಯಾಕೊ ಸುಮ್ಮನೇ ಯಾಗ। ನಡೆನಡೆಕರ ಕೊಂಡುಗಮ್ಮನೇಬೇರೆ। ನುಡಿಯಾದಿರೀಮಾತತಡ ವುದಿದ್ಯಾವನೀತಾ. ರಾಗ ನೀಲಾಂಬರಿ. ರೂಪಕ.

ಯಾರೇಳುಭುವನಾದೊಡೆಯವಿಶ್ವಪತಿರಾಮ। ಸಾ ರಸಾಂಬಕದೇವನೀನೂ । ನಾರಿಜಾನಕಿಯಲ್ಲಿತಪ್ಪೇನಾ ಣದೆಸುಮ್ಮ। ನಾರಣ್ಯದೊಳುಬಿಡಬ್ಯಾಕೇ ॥೧॥ ಅರಿ ಯಾದಮೂಢಾತ್ಮರಾರೇನಪೇಳ್ದರು। ಅರಿಯಾದೆದೇವ ರಮನಸೂ । ಕರುಣಸಬೇಕುಕಂಜಾಕ್ಷಿ ನಂಮಮ್ಮ ಗೆಂದೆರಗಿದಪಾದಪದ್ಮದಲೀ ॥೨॥ ಯೇಳೈಯತಮ್ಮಾ ನೀನೆಷ್ಟಪೇಳಿದರೇನು। ಕೇಳುವೆನಲ್ಲಾಯಿಮಾತಾ। ಬಾಳಲೋಚನನಾಣೆಬಲುಕಷ್ಟ ಬಂದಾರು। ಆಳುವೆನಲ್ಲ ಜಾನಕಿಯಾ ॥೩॥ ಯಾಪರಿಯಲಿರಾಮಕೋಪಿಸಲಕ್ಷ್ಮ ಣತಾಪಾವತಾಳಿಮನಶಿನಲೀ । ಆ ಪುಣ್ಯವಂತೇಯಕರ

ದುಯೇಕಾಂತವಿತಾಪೇಳ್ದೆ ನಾಗಧರಣಿಜೆಗೇ ೪

ರಾಗ. ಯಾಲಪದ.

. ಹರಿಣ ಲೋಚನೆಪುಣ್ಯವಂತೆ ಜಾನಕಿದೇವಿಅರಣ್ಯಕ್ಕೆತೆರಳಬೇಕಂತೆ ॥೧॥ ಅಗ್ರಜಭಾವನಪ್ಪಣೆಯಿಂದಕಾಡಿಗೆಪೋಗಲ್ । ಶೀಘ್ರದಿಪಯಣವಾಗುಬೇಗಾ ॥೨॥ ರಥವೇರು ತಡವ್ಯಾತಕೆನ್ನುತಾಯೆತೆಕೋಶ್ರಿ। ಜತೆಯಾಗಿಬೇಕಾದಂತಾದಂನೂ ॥೩॥ ಪೃಥುವಿಯಾತ್ಮಜಕೇಳಿ । ಮಾತನಿನ್ನಯನು ನೋವ್ರತವನಲಿಸುವನಿನ್ನಕಾಂತಾ ೪

ರಾಗ ಭೈರವಿ. ಜಂಪೆ ತಾಳ.

ಅನುಜಲಕ್ಷ್ಮಣ ಕೇಳುಮುನಿಗಳಾಶ್ರಮದಿ ಭೋಜನಮಾಡಲಪ್ಪಣೆಯು ನಿನಗಾಯಿತೇನೈ ॥ ೧ ॥ ತರಿಸುಸನ್ನ ಹವೆಲ್ಲತಂನಿಂದತಡವಿಲ್ಲ। ಪರಮಪಾವನವನಿತೆಪೊರಟಳಾಸೀತೆ ೨

ಅಗಿಲುಚಂದನಗಂಧಕಸ್ತೂರಿಕುಂಕುಮವ । ಬಗೆಬಗೆಯದಿವ್ಯಾಂಬರಂಗಳಂತರಿಶಿಕೊಂಡೊಗು । ವಿಗೆಯಹರುಷದಲಿಅಂತಃ ಪುರಕೆ ಬಂದುಕ ವ್ರಸಲ್ಯ ಯೊಡನೆಂದಳೂ ಮಧ್ಯಮಾವತಿ. ತ್ರಿಪುಟತಾಳ.

ತಾಯೆಕೇಳಿಂದೆನ್ನ ಮಾತರಾಯನಪ್ಪಣೆ ಕೇಳಿ ತ್ವಪ್ರಿಯದಿಮುನಿವರರತ್ರೀಯರಕೂಡೀ ॥ ೧ ॥ ಆಯುತದಿಂದಲವರೀಗೆಬಾಯು ನದಾನವನಿತ್ತು ಸೋಹಿಯನ್ನುಮಾಡಿನಾಳೆ ಬಾಹೆನೆಂದಾಳೂ

ರಾಗ ಶಂಕರಾಭರಣ. ತ್ರಿಪುಟೆ.

ಯೇನೆಜಾನಕಿಯಂದಿಗಿನ್ಲಿಗೆ। ದಾನವಂತಕಬರಲುಪೇಳಿದ। ಮ್ನಾನಿ ನಿಮಣಜೋಕೆ ಪೋಗುವಕಾನನದೊ

ಳೂ ‖೧‖ ಪೋಗಿಬರುವೆನುನಾಳೆಯನು ತಲೆ । ನಾ ಗಿಕೈ ಕೆಗೆನವಿುಸಿಸುವಿುತ್ರೆಗೆ । ಬೇಗದಿಂದಲಿ ಪಯಣವಾದಳುನಾಗವೇಣೀ ರಾಗ ಸೌರಾಷ್ಟ್ರ. ಅಟತಾಳ.

ರಾಮನಚರಣಾವನೆನವೃತ್ತತಾಯಿ । ಭೂಮಿದೇವಿಗೆನಮೊಯಂನುತಾ ‖ ಗ್ರಾಮದೇವತೆಯಕಂಡರಗುತ್ತಕುಲ । ಸ್ವಾಮಿಗೆಜಯವೆಂದುಸೊಗಳುತಾ ‖ ೧ ‖ ಕೇರಿಕೇರಿಯ ಮನೆಮನೆಗಳಾಅಲ್ಲಿ । ನಾರಿಯರಿಗೆಮುಗಿದು ಕರಗಳಾ । ನಾರಿ ಜಾನಕಿನಡೆತಂದಳೂ । ರಥವೇರಿಕಾಡಿಗೆನ ಡಯಂದಳೂ

ವಾ. ಹಾರಿಸಿದ ರಥವನರೆನಿಮುಷ ದಲಿಘಡಘಡನೆ । ಜಾರಿಸಿದಮರಕಲ್ಲುಗಿರಿಪರ್ವತಂಗಳಂ । ತೋರಿಸಿದಬಲುಭಯಂಕರಘೋರಕಾನನದಿಕರಡಿಹುಲಿಶಾರ್ದೂಲಗಳಾ ‖ ಘೋರಿಸುವರಕ್ಕಸರಹೊಳಲಮುರಿ ಮುರಿದುಕಡೆ । ಗೂರಿಸಿದರಥದಕೀಳ್ಗಿಳಿಚುವಂತಾಯ್ತುಮುದ । ವೇರಿಸಿದಹಯಗಳಂಬೋಳೈಸುತಿರೆಕಂಡುನಾರಿ ಜಾನಕಿ ಪೇಳ್ದಳು ರಾಗ ಮಾರವಿ. ಏಕತಾಳ.

ಯಲ್ಲಿಗೆಪೈಣವಿದೇನೂ । ನಿಲ್ಲುನಿಲ್ಲೆಲೊಲಕ್ಷ್ಮಣನೀನೂ । ಕಲ್ಲೆದೆಯಾಯ್ತಿಂದ್ಯಾಕೆ ಥರವಲ್ಲಪೋಗು ವದಿದುಬೋಕೆ ‖೧‖ ಮುನಿವಧುಗಳನಾಕಾಣೆಯಿದು । ವನವಲ್ಲ ಬಂದುದುನಿನ್ನಾಣೆ । ಧನುಜರಜೊಳಲಿದೆಮುಂದೆರಥವನು ತಿರುಗಿಸುನೀಹಿಂದೆ ‖೨‖ ಹುಲಿಕರಡಿ ಸಿಂಹಶಾರ್ದೂಲಾಹಾವುಗಳುಪರಿಯುತಲಿದೆಬಹಳಾ । ಕಳವಳಗೊಳುತಿದೆಮನಕೆ । ಯಾನಕರತಂದುದ್ಯಾಕೆಯಿಾವವನಕೇ ೩

ವಾ. ನರನಾಥಕೇಳವನಿಸುತೆನುಡಿದಮಾತಿಗು । ತ್ತರ

ವನಾಡದೆ ಮನದೊಳುರೆನೊಂದು ರಾಘವೇ | ಶ್ವರನೆಂದ ಕಷ್ಟಮಂಪೇಳ್ದಪೆನೊ ಮೇಣು ಸುರದಿರ್ದಪೆನೊ ನಿಷ್ಟುರದಲೀ|| ತರಣಿಕುಲಸಾರ್ವಭೌಮನರಾಣಿಯಂ ವನದೊ| ಳಿರಿಸಿ ಪೋದಪೆನೆಂತು ಮರಳಿದಿರ್ದಡೆಸಹೋ | ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಬೆಂದುಬೇಗುದಿಗೊಂಡನು

ರಾಗ ಶಂಕರಾಭರಣ. ತ್ರಿಪುಡೆತಾಳ.

ಮೇದಿನೀಸುತೆಕೇಳು ಜನರಪವಾದಬಂಗುದಕಳೆಯಲೋಸುಗ | ಆ ದಯಾಂಬುಧಿ ಕಳುಹಿದ ನುಮನ ಭೇದದಿಂದಾ ||ಶ್ರಿಷ್ಟಿಗೀಶ್ವರ ರಾಮಚಂದ್ರನು|ಶಿಟ್ಟಿನಿಂದಲಿ ನಿಮ್ಮ ಅಡವಿಗೆ | ಬಿಟ್ಟುಬಾರೆಂದೆನು ತನೇಮವ ಕೊಟ್ಟನೆನಗೆ

ವಾ. ಪ್ರಳಯಕಾಲದಶಿಡಿಲು ಬಂದೆರಗಿ ವಟವೃಕ್ಷ| ಯಿಳೆಗೊರಗುವಂತೆ ಲಕ್ಷ್ಮಣನನುಡಿಕೇಳಿ ಭೂ| ತಳಕೆ ಮೂರ್ಛೆ ತಳ್ದಾಗಿ ಬಿದ್ದಳಂಬುಜಾಕ್ಷಿಯಂ ಕಂಡು ಸೌಮಿತ್ರಿ ಬೆರಗಾಗುತಾ || ತಿಳಿನೀರ ಕಂಣ್ಗೊತ್ತಿ ಪತ್ರಗಳ ಕೊಡೆ ವಿಡಿದು| ಯಳೆನೀರ ಕೊಡುತ ಕಂಬನಿಯೊರಸಿ ಸಂತೈಸೆ ಮೂರ್ಛೆ | ತಿಳಿದೆದ್ದು ಲಕ್ಷ್ಮಣನ ಮೊಗನೋಡಿ ಅವನಿಸುತೆಯಾತೆಂದಳು

ರಾಗ ನೀಲಾಂಬರಿ. ರೂಪಕತಾಳ.

ಕೈಯಾರೆ ಖಡ್ಗವ ಕೊಟ್ಟು ತನ್ನರಸಿಯ | ಹೊಯ್ಯೆಯಂದುಪೇಳದೆ ಬರಿದೇ | ವೈಯಾನೆ ಕಾಡಿನೊಳ್ ಬಿಟ್ಟುಬಾರೆಂದೆಂನ ನೈಯ್ಯೆಯೊ ರಾಘವ ಕರುಣಾಳೊ ||೧|| ರಾಮನುಭುವನಾಭಿ | ರಾಮನ ಚರಣ ಸುಪ್ರೇಮನ ಪಾದವನಗಲೀ | ಯಿಾವಮಾಹಾಕಾಡಿನೊಳ್ ಳಿರುವದಂತಾಯ್ತೆ ರಾಮ ರಾಮಾಯೆಂದಳಬಲೇ ||೨|| ಕಾಡಿನೊಳಗೆ ಹುಲಿಯಿರುವಸುದ್ದಿಯ ಕೇಳಿ | ನಾಡೊಳೆ ಕ್ಕಲತೆಗದಂತೆ | ನಾಡ

ಮಾತನುಕೇಳಿಯಂನಾಈರೀತಿಯ । ಮಾಡಿದನಲ್ಲಯಂನರಸಾ ॥೩॥ ಕಾಣಲಾರದೆಹಗೆಯವರುಮಸ್ತಕದಲ್ಲಿ। ಮಾಣಿಕ್ಯವುಂಟೆಂದರವನಾ । ಪ್ರಾಣಾವತೆಗೆದಂತೆಜಾಲಮಾತ್ರಿಗೆಯಂನಪ್ರಾಣೇಶತೊರದನೆವಿಧಿಯೇ ॥೪॥ ಪಟ್ಟಪ್ರಮಾಣತಾರ್ಕಣೆಸಾಕ್ಷಿಚತುರ್ವಿಧ। ಯಷ್ಟಂಟುಧರ್ಮರಾಜ್ಯದಲಿ । ಬ್ರಷ್ಠಾರನುಡಿಗೆನ್ನ ತೊರದಾನೆ ಪ್ರಾಣೇಶಕೆಷ್ಟಸಂಸಾರಬಡವರಿಗೆ ೫

ವ. ಈ ರೀತ್ರಿಯಿಂ ಜಾನಕಿಯು ನುಡಿಯಲಾಗಿ ಲಕ್ಷ್ಮಣನು ಸುಮ್ಮನೆ ಯಿರಲು ಮತ್ತು ಧರಣಿಜೆಯು ಯೇನೆಂದಳೂ ಯಂದರೆ

ರಾಗ ಕಾಂಬೋದಿ. ಯೆಕತಾಳ.

ಯಾಕೆಮರುಗುವೆಲಕ್ಷ್ಮಣಾಕೋಪಿಸುವೆನುಕಾ ಕುಸ್ತನಿನ್ನಮೇಲೆ। ಸಾಕುತಾನಾದರುರಾಮ।ವಳ್ಳಿತಾಗಿರಲಿರಾಕೆಂದುನಿಭವದನಾ ॥೧॥ ವಲ್ಲಾಭಗಿಂತಮನಸೂ । ಬಂತಲ್ಲಹೀಗೆಕಳ್ಳೆದೆಯಾಗುವರೇ ॥೨॥ ಕೊಲ್ಲಾದೆಬಿಟ್ಟುಪೋಪೆಯಾ। ಈಕಾಡಿನಲ್ಲಿಯಲ್ಲಿಗೈದುವೆನುಜೇಯಾ ॥೩॥ ಕೌಸಲ್ಯೆಸುಂಮುನಿದ್ದಳೆ। ಸಾಮಿತ್ರಾದೇವಿಈಕೆಲಸಕೊಪ್ಪದಳೆ ಬಹುಕಾಲ ಯಿದ್ದಜಾಂಬಾವಭಕ್ತಹನುಮಂತ ತಾಕೇಳಿಸುಮ್ಮನಿದ್ದನೇ ॥೪॥ ಯಾರಿದ್ದುಯೇನಮಾಳ್ಪರು। ಯಂನಫಣೆಯಲ್ಲಿಈ ರೀತಿಬರದಮೇಲೇ॥೫॥ಮೂರುಭಾರಿಗೆಪೇಳಿದಾಮೇಲೆಯಿಂನುಂಟೆ ಶ್ರೀರಾಮಚಂದ್ರನಶೇವೆ

ವ. ಇಂತೆಂದುಜಾನಕಿನುಡಿಯಲಾಗಿಲಕ್ಷ್ಮಣನುಯೇನೆಂದನುಯಂದರೆ ರಾಗ ಭೈರವಿ ಆದಿತಾಳ.

ಅಂಬರಮಾಣೆಗಳಿರಾ । ಕುಂಜಿನಿದೇವತೆಗಳಿರಾ। ಶಂ

ಭುಗಾರಿಗಣಪವಿಷಣ್ಣಯೆಂಬದೇವತೆಗಳಿರಾ ॥೧॥ ವನದೊಳುಳ್ಳವುುನಿಗಳಿರಾಯೇ ಪಕ್ಷಿಗಳಿರಾ । ವನಿತೆಸೀತೆಯಿುಹಳುಜೋಕೆಯನು ತತೆರಳಿದನೂ॥೨॥ ಅಷ್ಟದಿಕ್ಪಾಲಕರಿರಾ ತ್ರಿಷ್ಟಿಪಾಲಕರಿರಾ। ಪಟ್ಟದರಸಿಯಿುಹಳು ಜೋಕೆಯನುತ ತಿರುಗಿದನೂ ೩

ಇಂತೆಂದುಸಕಲಸುರರಿಂಗೆರಗಿಲಕ್ಷ್ಮಣಂ। ಪಿಂತೆತಿರುಗಲ್ಕಿತ್ತಯಿ ತ... ಜಾ ನಕಿಯುುವಿರಹ । ಸಂತಾಪದಿಂದ ಕೂಗಿದಳುಗದ್ಗದಸ್ವರದಿಕಲ್ಮರಂಕರಗುವಂತೆ

ರಾಗ ಕಾಂಬೋಧಿ ಯೆಕತಾಳ.

ವನದೊಳಗಿರಲುನಾಬಂದೇಯೆಂನ । ಧನುಜನೊಬ್ಬ ಯೆಲುಕೂಡಬಂದೇ। ಕ್ಷಣದೊಳಗಸುರರಕೊಂದೇ। ಬಿಟ್ನೆನು ತಧೈರ್ಯ್ಯವಮಾಡಿತಂದೇ ॥೧॥ ಅರಿತುನೀಸುಖದೊಳಗಿರದೇಯೆಂನ। ನೆರದಕಾಡಿನೊಳುಬಿಟ್ಟುಬರಿದೇ। ಕರು ದೆಮನನ್ಯೆನಿನಗೆಯೊಯಿಾಗಮರತರೆಗತಿಯಾರೆನಗೇ ೨ ಬಲುಬಲುಗುಣಗಳುಳ್ಳವನೇಜಗವ। ನುಳುಹಿದಲಕ್ಷ್ಮಿವಕ್ಷಭನೇಸುಲಲಿತರೂಪಕೇಶವನೇನಾ । ಬಳಲುವೆಕಾಯೆ ಪರಶಿವನೇ

ರಾಗ ಸಾವೇರಿ ಅಟತಾಳ.

ಸೀತೆಹೀಗೆಂದುಕೂಗ್ಯಾಡುತ್ತ।ಭೂತನಾಥನದೆಸೆಯುನ ನೋಡುತ್ತ। ಭೂತಳದೊಳುಬಿದ್ದುಮಾಣದೆವ್ಯೆಯಥ ತುಗೆಟ್ಟಳುಕಂಣುಕಾಣದೇ ॥ಪ॥ ಕಂಡುಚಮರಿವ್ಯೃಬೀಸುತ್ತಮ್ಯೃಗ। ಹಿಂಡುತಳಿರತಂದುಹಾಸುತ್ತ। ಹಿಂಡ ಪಕ್ಷಿಗಳು ನೇವರಿಸುತ್ತದೇವಿಪುಂಡರಿಕಾಕ್ಷನನೆನೆ ತ್ತ ॥೧॥ ಬಿಸಿಲುಘಾಳಿಗೆವ್ಯೆಯಬಾಡುತ್ತ ಬಿದ್ದು। ಕೊ ಳುವಂತೆವುತ್ತೆಳುತ್ತವುಸುರದಂತೆಭಯವತಾಳುತ್ತರಾಕ್ಷಸ

ಬೊಬ್ಬೆಗಳೆಂನುಕೇಳುತ್ತಾ ||೨|| ಕೂಗುತ್ತಿಕಲುಸೊಲ್ಲ ಸೊಲ್ಲಿಗೇಬಂಡನಾಗವಾಲ್ಮೀಕಿಮುನಿಯಲ್ಲಿಗೆ। ಯೋಗಸಂನಹಗಳಅರಸುತ್ತಅಲ್ಲಿ। ನಾಗವೇಣಿಯಕಂಡುನುಡಿಸುತ್ತಾ

ರಾಗ ಭೈರವಿ. ಜಂಪೆತಾಳ.

ಅಮ್ಮಕೇಳಂಜದಿರುಅಳುವದ್ಯಾತಕೆಬರಿದೆ। ನಿಮ್ಮ ರಾಜ್ಯಗಳೆಲ್ಲಿ ಎ ವ್ಯಾರಮುಗಳೂ||೧||ಮಾತೆಕೇಳ್ ನೀನ್ಯಾವಭೂತಳಾಧಿಪನರಸೆ। ಯಾತಕೋಸುಗಬಂದೆ। ಯಿೂತಪೋವನಕೇ ||೨|| ಕಾಂತೆನಿನ್ನನುಹಿಂದೆಕಂಡಹೊಲಬಿದೆಮುಂದೆ।ಚಿಂತೆಬಿಡು ವಾಲ್ಮೀಕಿಯಂತೆಂನಪೆಸರೂ||೩|| ಆಪತ್ತುಬಂದಾಗಅತಿಧೈರ್ಯಯಿರಬೇಕುಯಿೂಪಾಟಕೂಗುವರೆಯಿೂಕಾಡಿನೊಳಗೇ||೪||ನಯದಿಂದವಾಲ್ಮೀಕಿನಂಬಿಸುತಮಾತಾಡೆ। ಭಯದಿಂದವುಸುರಿದಳುಬಲ್ಲಮುನಿಯೊಡನೆ

ರಾಗ ನಿಲಾಂಬರಿ. ರೂಪಕತಾಳ.

ದಶರಥನೃಪತಿಗೆ ಸೊಸೆಯಾಗಬೇಕೆಂನ। ಪೆಸರುಜಾನಕಿಯೆಂಬರೆಲ್ಲ। ಯಸವರಾಘವನಪಟ್ಟದರಾಣಿಅಯೋಧ್ಯಾ। ಪುರವನಾಳುವನೆಂನರಮಣಾ ||೧|| ಯಿರುಳೊಂದು ದಿನನಡು । ಯಿರುಳುಪಟ್ಟಣದೊಳುತಿರುಗಾಲುರಜಕಾನಮನೆಯಾ । ತರುಣಿಪುರುಷರು ತಂಪೊಳಗೆ ಕೊಂದಾಟದೊಳ್ಳಿರುಹುದರ್ಕೇನೊನಾನರಿಯೇ||೨||ಮರುದೀನವುದಯಾದಿಯನುಜಾನ । ಕರದುನಾನರಿಯ ದಂಡಿನೇಮವಿತ್ತ। ತರಳೇಯ ಕಾಡೊಳುಬಿಟ್ಟುಬಾರೆಂದೆಂನ। ಕರತಂದನಿಲ್ಲಿಸವುಮಿತ್ರಾ ||೩||ಯಿೂಕಾಡಿನೊಳುಬಿಟ್ಟುಪೋದಲಕ್ಷ್ಮಣನಿಂನೆಹಾದಿಯಕಾಣದೆಮುಂದೆಯೆದಯಾನಿಧಿಯೆನಿಂಮಪಾದವಕಂಡೆಯಿಂನಾದರುಕಾಯಬೇಕೈ

ಯಾ॥೪॥ ವಿಷವ ಕುಡಿದು ಸಾವೆನೆಂದಾರೆ ಯನಗೀಗ। ಬಸು ರಿಗಾಯಿತು ತ್ರಿಂಗಳಾರೂ। ವಶವಿಲ್ಲಯಿನ್ನು ಜೀವಿಸುವಂ ಕಾಣೆಂದು ಶಶಿಮುಖಿ ಬಿದ್ದಳಂಘ್ರಿಯಲೀ ೫

ರಾಗ ಸೌರಾಷ್ಟ್ರ ತ್ರಿಪುಡೆ.

ಯೇಳುಚಿಂತಿ ಸಬೇಡಜಾನಕಿ । ಕೇಳು ತನ್ನ ಯವಾ ತ। ಲಾಲಿಸುಲೋಲಲೋಚನೆಅಂಜಿಕೆಯಬಿಡುಪಾಲಿಸು ವೆನೂ ॥ ಮುಗುದೆಕೇಳ್ವಾ ಬೇರೆಮನಸಿಲಿ। ಬಗೆಯದಿರು ವಾಲ್ಮೀಕಿ ಮುನಿನಂಮಗಣೆತಾಶ್ರಮದೊಳಗೆಯಿಹುನೀ ಮಗಳು ನಮಗೇ

ರಾಗ ಮುಖಾರಿ· ಅದಿತಾಳ.

ದೂರಾನಿಲ್ಲಿತ್ತ ಬರಬ್ಯಾಡನ್ವೋಯಿಂಥ।ಘೋರಾಕಾನನ ದಲ್ಲಿನಾರಿ ಸಂಜವಳುನಾನೂದೂರಾನಿಲ್ಲತ್ತಬರಬೇಡನ್ವೋ

ರಾಗ ನೀಲಾಂಬರಿ. ಯೇಕತಾಳ.

ನಂಬಿಕೊಳ್ಳೆನಂಬಿ ಕೊಳ್ಳೆನಾರಿ ಕೇಳ್ವಾ ವ್ವಾ। ಹಂಬಲಿ ಸಬ್ಯಾಡಮಾವಿದುಂಬಿಗುರುಳ್ವಾ ವ್ವಾ ॥ಪ॥ ತಕ್ಕನವಾ ತಲ್ಲಕೇಳು ಚಿಕ್ಕಪ್ರಾಯದವ್ವಾ। ಅಕ್ಕರಿಂ ಬಿಬ್ಬಾರು ಸು ಜವ ಕ್ಕಳಾಗುವರವ್ವಾ ॥೧॥ ಪುತ್ರರಾದಮೇಲೆನೀನಿತ್ತ ಕೇಳವ್ವಾ। ಮತ್ತೆರಾಮಚಂದ್ರದೇವನೊತ್ತಿಲಿಯಿರುವೆಯ ವ್ವಾ॥೨॥ ಯಿಕೊಳ್ಳೀ ದೂರಿಲ್ಲನಂಮಾಶ್ರಮಕೆಬಾರವ್ವಾ। ಮುಕ್ಕಂಜನಾಣೆ ಬೇರೇನುಲೆಕ್ಕಿಸಾದಿರವ್ವಾ ೩

ವಾ. ಹೊಡವಮಳೆಹೊಯ್ಲನೀರಲಿಮುಳುಗಿಸಾ ವವನ। ಪಿಡಿದೆತ್ತಿಜೀವವನ್ನುಕಾಯ್ದಂತೆ ಭಯದಿಂದ। ಮಿಡುಕುತ್ತಿ ಜಾನಕಿಯ ಕರತಂದ ಆಶ್ರಮಕೆತಾಪಸೋ ತ್ತಮನು ಬಳಿಕಾ ॥ ಕಡು ಪತಿವ್ರತೆಜಗಜ್ಜನನಿ ತಂನಾಶ್ರಮ

ಕಿ| ನಡೆತಂದಳಿನ್ನುಪಾವನನಾದೆನೆಂದೆನುತ | ಬಿಡದಿತ್ತಪ ಣ೯ಶಾಲೆಯರಚಿಸಿಸಜ್ಜನರಿಗಡವಿಯೇ ಮನೆಯಾದುದೂ

ರಾಗ ಯರಕಲ ಕಾಂಬೋದಿ. ಯೇಕತಾಳ.

ಬೆಳಗಾಗುತ್ತಲೆಯೇಳ್ವಳೂಜಾನಕಿದೇವಿ|ಹೊಳೆಯಲ್ಲಿ ಮಿಂದುಬರುವಾಳೂ ||ಪ|| ಜಲಜಪುಷ್ಪಾವಕೊಯ್ವಾವ ಳೂ | ಆಹೂವ್ವತಂದುಮುನಿಪಾದಕರ್ಪಿಸುವಳೂ ೧ ಮೂರುಪ್ರದಕ್ಷಣೆಗೈವಾಳೂ | ವಾಲ್ಮೀಕಿಮುನಿಗೆವ್ರೋ ರಂತೆಕೈಯಮುಗಿವಾಳೂ ||೨|| ಆಮೇಲೆಪರ್ಣಶಾಲೆ ಯೊಳೂಕೂಳಿತುಕೊಂಡು | ರಾಮಧ್ಯಾನವಮಾಳ್ವ ಳೂ |ಶ್ರೀರಾಮಾರಾಮಾಯೆಂನುತಾ |ಜಾನಾಕಿದೇವಿನವ ಮಾಸಭರಿತವಾದಳೂ ೩

ರಾಗ ಸೌರಾಷ್ಟ್ರ. ಯೇಕತಾಳ.

ಅಂಗಾನೆಸೀತೆಗೊಂಬತ್ತುತಿಂಗಳಾಯಿತು | ಕೋಮ ಲಾಂಗಿಗೆಸಂತಾಪಹೆಚ್ಚಿಮುಂಗಾಣಿಸಿತೂ | ಅಂಗನೆಸೀತೆ ಗೊಂಬತ್ತುತಿಂಗಳಾಯಿತ್ತೂ ||೧|| ಸುತ್ತಾಮುತ್ತಾಲಿರು ವಮುನಿಪತ್ನಿಯರೆಲ್ಲಾರುಕೂಡಿ| ಮತ್ತೆಗಜಗಮನೆಯ ಸಂಕಟವನೋಡುತ್ತಾ | ಮತ್ತಾದಾಕೆಬೇಕಾದಂಥ | ವಸ್ತುಗಳೆಲ್ಲಾವತರಿಸಿ ಸುತ್ತಾಲುಭೂಜಾತೆಯನ್ನು ಕಾಯುತ್ತೀರ್ದರೂ ||೨|| ನಾರಿಯರತ್ತಿತ್ತತಿರುಗಾಡುವ ಕಾರಣವಕಂಡು | ಬೇರೆ ಯೇನಾಹುದೊಯೆಂದುಬೆದ ರುತಿದರ್ನೂ| ನಾರಾಯಣನೆಗತ್ರಿಯನ್ನುತ್ರವಾಲ್ಮೀ ಕಿಮುನಿಪ ತಾನು ಮೂರು ದಿವಸಹಗಲುಯಿರುಳುಕಾ ಯುತಿರ್ದನೂ ೩

ವಾ. ಮಂದಗಾಮಿನಿಸೀತೆಶುಭಲಗ್ನಶುಭತಿಥಿಯೊ|

ಳೊಂದಿರುಳು ಪಡದಳು ಕುಮಾರರೀರ್ವರನುಕೇಳ್ ಸುರ| ದುಂದುಭಿಯು ಮೊಳಗಿತಾಕಾಶದಲಿ ಜಯತು ಜಯತೆಂ ದುಪೂಮಳೆಗರದರು || ಮುಂದೆರವಿಕುಲದಬೆಳೆವುದ್ಭವಿಸಿರಘುವಂಶ | ಸಿಂಧುಚಂದ್ರಮರು ಜಾನಕಿಯ ಪುಣ್ಯಾಂಕುರದ | ಬಂಧುರವೊಯೆಂದು ತೋರಿಸಿ ತುನೋಳ್ಪರ ಕಂಗ್ಳೆತೋರಿಬೆಳಗಿದರೀರ್ವರೂ

ರಾಗ ಶಂಕರಾಭರಣ. ಯೇಕತಾಳ.

ಹೆತ್ತಮಕ್ಕಳ್‌ಬಾಣಂತೀಗೆ| ಹತ್ತುರಾತ್ರೆಯಾದಮೇಲೆ | ಚಿತ್ತವೀಸಿವಾಲ್ಮೀಕಿಮುನಿ ಪೋತ್ತಾಮನಂದೂ ೧ ಶಾಸ್ತ್ರವಿಧದಿಂದಪುಣ್ಯಾವರ್ಚನೆಯಮಾಡಿ | ಮಂತ್ರಯುಕ್ತದಿಂದಜಾತಕರ್ಮಗಳಮಾಡಿದಾ ||೨|| ಸೋಮಸೂರ್ಯರಂತಿಪ್ಪಸತ್ಕೋಮಲಾಂಗರೀರ್ವರಿಗೆ | ಪ್ರೇಮದಿಕುಶಲವರೆಂಬನಾಮವಿಟ್ಟನೂ ||೩|| ಆಕುಮಾರರಿಬ್ಬರಶುಭಲಗ್ನಕರಗಳನೋಡಿ | ತಾಕರದುಸೀತೆಗೆವಾಲ್ಮೀಕಿಪೇಳ್ದನೂ ||೪|| ಕೋಕಿಲಸುವಾಣಿಕೇಳುನಿಂನಾಕುಮಾರರೀರ್ವರು | ಲೋಕಾದೊಳಗತ್ರಿಜಾಣರೆನಿಸಿಕೊಂಬರೂ ||೫|| ತ್ರಿಷ್ಟಿಜಾತೆಮಕ್ಕಳೀರ್ವಪುಟ್ಟಿದಶುಭಲಗ್ನದಲ್ಲಿ | ಅಷ್ಠದಿಕ್ಪಾಲಕರಿಗೆಶ್ರೇಷ್ಠರೆನಿಸಿ ||೬|| ಕಷ್ಟದಿಂದತಂದೆಮಕ್ಕಳಿಷ್ಟವಾಗಿ ಹುಂದಯೋಧ್ಯ | ಪಟ್ಟವನಾಳುವರೈಸೇದುಷ್ಟಾಂತವಿದೂ ||೭||

ವ. ಇಂತು ಮುನಿಪತಿಯು ಪೇಳಿತನ್ನಾಶ್ರಮಕ್ಕೆ ತೆರಳಲಾಗಿ ಮುನಿಪತ್ನಿಯರೆಲ್ಲರು ತೊಟ್ಟಿಲೊಳಿಟ್ಟು ಪಾಡಿದರದೆಂತೆನೇ

ಜೊಗುಳಪದ. ಶಂಕರಾಭರಣ ಅಟತಾಳ.

ಕನಕನಿರ್ಮಿತವಾದತೊಟ್ಟಿಲತರಿಸಿ। ಮುನಿಪತ್ನಿಯ
ಲ್ಲರುತಾಮಶೃಂಗರಿಸಿ। ಅನುಕೂಲವನುಮಾಡಿಗಣಪಾನ
ಭಜಿಸಿ।ಜನಕಾಜೆಕುವರಾರತೊಟ್ಟಿಲೊಳಿರಿಸಿಜೋಜೋ॥
ಜೋಜೋ ಸೀತಾದೇವಿಯಕಂದಾ।ಜೋಜೋ ಶ್ರೀರಾ
ಮಪುತ್ರಆನಂದ। ಜೋಜೋ ರಾಕ್ಷಸಕುಲವೈರಿಕಂದಾ।
ಜೋಜೋ ಯನುತತೂಗಿದರೊಲವಿಂದಾ ॥೧॥ ಜೋ
ಜೋ ರಾಮನಪ್ರೇಮದಕಂದಾ ಜೋಜೋ ಭೂಮಿಗೆಪ
ತ್ರಿಯಾಗಿನಿಂದಾ।ಜೋಜೋ ಭಕ್ತಾರಸಲಹೊವಕಂದಾ।
ಜೋಜೋ ಕುಶಲವರೆಂದುಪಾಡಿದರೂ ॥೨॥

ದ್ವಿ. ಮೊಲಹಾಲವುಣುತಿರುವಮಕ್ಕಳೀವರ್ಣಿಗೆ।
ಮಲವು ಮಿಗಿಲಾದಿವಸವರುಷ ನೆಲೆಯಾಗೆ। ತಪಸಿನಾ
ಶ್ರಮದೊಳಗೆತರಳರಿರಕಂಡೂ। ಚಪಲಾಕ್ಷಿಮನದೊಳ
ಗೆಚಿಂತ್ರಿಸಿದಳೆಂದೂ। ಪರದೇಸಿಸುತರಿವರ ಪಾಪವೇನೆಂ
ದೂ। ತರಳೆದುಃಖಿಸೆಮುನಿಪತಾತ್ರಿಳಿದನಂದೂ। ಸುರಪು
ರಕೆಕಳುಹಿದನುಶಿಷ್ಯರನು ಬೇಗಾ। ಸುರತರಳರಾಭರ
ಣಗಳತಂದರಾಗಾ। ಮಕುಟದರಳೆಲೆಮುತ್ತುಮತ್ತದರ
ಸುತ್ತೂ। ಅಖಿಳರತ್ನಾಭರಣ ಆದರೊಳಿರುತಿತ್ತೂ। ಕಾ
ಲಲಂದುಗೆಗೆಜ್ಜೆಕಡಗಕೈಬೆರಳಾ। ಸಾಲಾಗಿವುಂಗುರವುಸ
ರಪಣಿಯ ಕೊರಳಾ। ಹುಲಿಯು ಗುರುವಡ್ಯಾಣಹೊ
ವ್ವಿನಂಗಿಗಳಾ। ಬಲುಪ್ರಕಾಶದೊಳಿರುವಬಹಳಭೂಷಣ
ವಾ। ತೊಡಿಸಿದನುಮಕ್ಕಳಿಗೆತಕ್ಕವಸ್ತ್ರಗಳಾ। ಮುಡಿ
ಸಿದನುಮುನಿರಾಯನುಡುವಪಟ್ಟೆಗಳಾ

ರಾಗ ಪಂತವರಾಳಿ ಮಟ್ಟತಾಳ.

ಕಂಡುಸೀತೆಹರುಷವಾದಳೂ। ಪುಂಡರೀಕನಯನೆತ

ನಗೆಪುಟ್ಟಿದ ಮಕ್ಕಳ ಚೆಲುವಿಕೆಯನು। ಕಂಡು ಸೀತೆ ಹರುಷ
ವಾದಳೂ ॥ಪ॥ ಶಶಿಯ ಪೋಲ್ವ ಮುದ್ದು ಮೊಖದೊಳೆಸೆವ
ಕದಪಿನಲ್ಲಿ ಪೊಲ್ವ। ಮಿಸುಪ ಕರ್ನಕುಂಡಲ ಸಿರದೊಳೆಸ
ದುಜೊಲುತಾ । ಕುಸುಮಶರನ ಬಾಣವೆರಡು ಪೆಸರಿನಿಂದ
ಶಿಶುಗಳಾಯ್ತೊ ಬಂಣಿಸುವಡರಿದು । ಕುಶಲವರು ಸಂತ
ಸದಿ ನಲಿದು ಬರುವ ಚೆಲುವಿಕೆಯನೂ ಕಂಡು ಸೀತೆ ಹರುಷ
ವಾದಳೂ ॥೧॥ ಗೆಜ್ಜೆ ಕಾಲಂದುಗೆ ಘಲ್ಲು ಘಲ್ಲಿರೆನುತ। ಪ್ರಜ್ವ
ಲಿಸುವ ಮಾಗಾಯಿ ಗಳುಲಿಯಲೂ । ವಜ್ರದ ಹರಳ ಕೆತ್ತಿದ
ಮುಕುಟ ಸಿರದೊಳೆಸೆಯಲೂ। ನಿರ್ಜರರೆದೆಯ ಕಣೆಗಳೊ
ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ನಲಿದು ಬರುವ ಚೆಲುವಿಕೆಯ
ನು ಕಂಡು ಸೀತೆ ಹರುಷವಾದಳೂ ॥೨॥

ರಾಗ ಭೈರವಿ ಜಂಪೆತಾಳ.

ಮೂರು ವರುಷದ ಮೇಲೆ ಮುದದಿಂದ ಮಕ್ಕಳಿಗೆ। ಹೇ
ರಂಬ ಅಕ್ಷರವ ಆರಂಭಿಸಿದನೂ ॥೧॥ ಬರಹನೆಲ್ಲವ ಕಲಿತು ಬಂ
ದ ಮಕ್ಕಳನೋಡಿ। ಗುರು ವೇದಶಾಸ್ತ್ರಗಳ ವದಗಿ ಕಲಿಸಿದ
ನೂ ॥೨॥ ಸಂಗೀತವಿದ್ಯಗಳ ಸಾಧಿಸುತ ಪಾಡಿದರು । ವಿಂ
ಗಡದಿ ನುಡಿಸಿದರು ವೀಣೆಗಳ ಸ್ವರವಾ ॥೩॥ ಆ ಮುದ್ದು ಮ
ಕ್ಕಳಿಗೆ ಅರ್ತಿಯಲಿ । ವಾಲ್ಮೀಕಿ ರಾಮಾಯಣದ ಕಥೆಯ
ತಾ ಮುದದಿ ಪೇಳ್ದಾ

ವ. ಇಂತು ಸಕಲವಿದ್ಯವಂ ಕಲಿತವರಾಗಿ ಮುನಿ
ಯಡೆಗೈದಿ ಮುತ್ತಿಂತೆಂದರೂ

ರಾಗ ಕಾಂಬೋದಿ ಯೇಕತಾಳ.

ಜಯ ಜಯ ಮಹಾಮುನಿವರೇಣ್ಯ ಮಾಂಪಾಹಿ ಪಾಹಿ ಭ
ಯನಿವಾರಣ ಆಗ್ರಗಂಣ್ಯಾ॥ ಬುದ್ಧಿವಂತರಾದೆವೈಯನಾವು

ನಮಗೆ ಬಿಲ್ಲು ವಿದ್ಯಾವ ಕಲಿಸ ಬೇಕು ನೀವೂ ॥೨॥ ಸಂಣ
ವರು ನೀವು ನಿಮಗ್ಯಾಕೆ ಬಿಲ್ಲು ವಿದ್ಯಾವು । ಬಂಣವಲ್ಲ ಕೇ
ಳಿರ ಪಾಪಿಗಳಿರಾ ॥೩॥ ಬೇಟೆಯಾಡಪ್ರೋಃ ಪ ಮಕ್ಕಳೆಲ್ಲ ನಂ
ಮನು ಕಂಡು । ಪಾಟವ ಮಾಡಿ ಬೈವಾರು ಹೆಡ್ಡರೆಂದೂ ॥೪॥
ಕಾಣಿಸದಿರಿ ವಿದ್ಯಾವ ನೀವು ನಮಗೆ ಗುರುರಾಯ ನಿಮಗೆ
ಜೋಡಿಲ್ಲಾ

ರಾಗ ಭೈರವಿ. ತ್ರಿಪುಡೆ.

ನೋಡು ಜಾನಕಿ ಮಕ್ಕಳಾ । ಬಿಲ್ಲು ವಿದ್ಯಾವ ಸಾಧಿಸ
ಬೇಕೆಂದೂ । ಕಾಡುತ್ತಿಹರಿಂದೂ ॥೧॥ ಚೆಲುವ ಬಾಲರಿ
ವರು । ಬಿಲುವಿದ್ಯಾಗಳನೆಲ್ಲ ಕಲಿಯಲಪೇಕ್ಷಿಸುವರು ।
ಬಲವಂತರಾಗಿ ಸಕಲಿಗಳೊಳಿವರಿನ್ನೆಂದೂ ॥೨॥ ಥರವಲ್ಲ
ಯುಂದರಿದು ಛಲವ ಮಾಡುವರ್ಬಂದು ಹುಲಿಯ ಮರಿಗಳು
ತಾವು ಹುಲ್ಲ ಮೇವರೆ ಪೇಳೊ

ಭಾ. ನಾಗವೇಣಿಯು ಮುನಿಯು ಪೇಳ್ದನು । ರಾಗವಚನವ
ಕೇಳಿ ಪ್ರೇಮದೊ । ಳಾಗ ಮುನಿಪತಿಗೆರಗಿ ಪೇಳ್ದಳು ಭಕ್ತಿಭಾ
ವದಲಿ ॥ ಆಗದಾಗದು ಗುರುವೆ ನುತ ತಲೆ । ವಾಗಿ ಸೀತೆಯು ಕರ
ದುಮೊಬ್ಬಿಸ । ಲಾಗ ಮಕ್ಕಳಿಗೆಂದಳ ಬಳಿ ವಿವೇಕ ಮಾರ್ಗಗಳಾ

ರಾಗ ಪಂತುವರಾಳಿ. ರೂಪಕತಾಳ.

ಸದರವಲ್ಲ ಬೇಟೆ ಮಕ್ಕಳಿರಾ ಸದರವಲ್ಲ ಬೇಟೆ ನಿಮಗವ
ರ ತಳ್ಳಿ ಬೇಡವೆನ್ನುತ್ತ । ಚದುರರಿನ್ನು ಸಂಣವರು ಮುನಿಯ
ಪಾದದ ಶೇವೆ ಮಾಡುತ್ತ ಮುಂದದಿ ವೇದ ಶಾಸ್ತ್ರ ಪುರಾಣ ರಾಜ
ನೀತಿಗಳನು ಅದರ ಮೇಲೆ ತಿಳಿದು ನಾನಾವಿಧದ ವಿದ್ಯಾವ ಕಲಿ
ಯಿರ ಪಾಪಿ ಸದರವಲ್ಲ ಬೇಟೆ ಮಕ್ಕಳಿರಾ ॥೧॥ ಕಾಡಿನೊಳಗೆ
ಕಗಡಿಸಿಸ್ಕ್ರ । ಗೂಡಿ ಹುಲಿಯು ಗವಿಯ ಹಂದಿಗ । ಳೊಡುತ್ತಿ

ಹುದುವಿಷದಸರ್ಪಗಳ್ನೋಡಿಬಿದರದೆ । ಮೂಡಬೊ ಮುಠಕ್ಕಸರ್ವನೆಯ । ಮಾಡಿಕೊಂಡಿಸರುಜನರ । ಬಿ ಡಿಸುವರುಸಟಿಯಮಾತಲ್ಲ।ಕೇಡುಬಹುದು ಮಕ್ಕಳಿ ರ ಸದರವಲ್ಲಬೇಟೆಮಕ್ಕಳಿರಾ

ರಾಗ ಮಾರವಿ ಯೇಕತಾಳ.

ಮೃಡನಾಕೃಪೆಯೊಳ್ಕಡುವೀರರುನಾವು । ಬಿಡೆವ ಬೇಟೆಯನೀವು ತಡೆಯಲಾಗದೂ ಹೀಗೆಪೇಳ್ವರೆ ಅಂ ಮ್ಮ ಯನೀವುಹೀಗೆಪೇಳ್ವರೆ ॥ಕ್ಷತ್ರಿಯರೊಳುದಿಸುವಶತೃವ ವಧ ಸುವೆ। ವುತ್ತುಮಪರಕೆಯ ನಿತ್ತುಕಳುಹಿಸದೆ ಹೀಗೆಪೇ ಳ್ವರೆಅಂಮಯನಿವುಹೀಗೆಪೇಳ್ವರೇ

ರಾಗ ಪಂತವರಾಳಿ. ಮಟ್ಟತಾಳ.

ಸೀತೆಬ್ಯಾಡವೆಂಗುಪೇಳ್ದಮಾತಕೇಳದೆ । ಮುನಿನಾಥನ ಡಿಗೆನಮಿಸ್ಸ್ರೀತಿಯಿಂದಪಿಡಿಯುತಾ । ವ್ರೋತುಶರವಬಿ ಡುವತೊಡುವರೀತಿಯನ್ನುಕಲಿತು ಕೊಂಡುಕಿರಾತಮ ಕ್ಕಳಸಂಗಡ ಖಗಮೃಗಗಳ್ಕೊಲ್ಲುತ್ತಾ । ಭೂಜಾತೆ ಯಣುಗರೂ ವನದೊಳಾಡುತ್ತಿರ್ದರೂ

ಭಾ. ಹುಲಿಕರಡಿಕಾಡ್ಗೋಣಪಂದಿಯ । ಬಳಗವನು ಸಂಹರಿಸಿತ। ರಳರು ತಳುವದೀಗ ಲಪೋಗಬೇಕೆ ನುತಾಗ ಮನದಲೀ ॥ ತಿಳಿದುಬಹರಾಶ್ರಮಕೆಲೀಲೆ। ಯೊಳಿರುತಿ ರಲುವಂದು ದಿನವರುಣನು । ಕಳುಹಿದೋರ್ವನುಬಂ ದುಮುನಿಪದಕೆರಗುತ್ತಿಂತೆಂದಾ

ರಾಗ ಸವುರಾಷ್ಟ್ರ. ತ್ರಿಪುಡೆ.

ಚಿತ್ತವಿಸುಮುನಿನಾಥವರುಣನು । ಮತ್ತೆಯಜ್ಞವನಡ ಸಲೋಸುಗ । ವೃತ್ತರವಕಳುಹಿದನು ವಾಲೆಯನಿತ್ತುನಿ

ಮಗೇ ‖ ೧ ‖ ಕಾದಿಹರು ಕೂಡಿರುವ ಋಷಿಗಳು । ಹಾ
ದಿಯನು ಈಕ್ಷಿಸುವ ರಾಧಿಪ । ಓದಿನೋಡಿದಕ್ಷಣವೆತೆರಳೆಂ
ದು ಪಾದಕೆರಗೇ ‖ ೨ ‖ ವಾಲೆಯನು ಕಂಡಾಕ್ಷಣವೆ ಮುನಿ ।
ಪಾಲಸೀತೆಯ ಕರದು ಪೇಳಿದ । ಲೋಲಲೋಚನೆ ಕರೆಯ
ಬಂದಾ ಪಾತಾಳದಿಂದಾ ... ... ‖ ೩ ‖

ರಾಗ ನೀಲಾಂಬರಿ. ರೂಪಕತಾಳ.

ಹೋಗಿಬರುವೆಯಾಗ ಕೈಯಿಾಗ ಮಕ್ಕಳ ಜೋಕೆ ।
ನಾಗವೇಣಿ ನಿನ್ನ ಕುವರ ಪೋಗದೆಲ್ಲಿದೂರಾ ‖ ೧ ‖ ಯಿಂ
ನೀಗೆ ಬರುವಿರಿತ್ತ ತಂದೆ ಮುನಿನಾಥ । ಕಂದರೀರ್ವರ ಬೇಸ
ರ್ವೆಯಂದಳಾಗ ಸೀತೆ ‖ ೨ ‖ ನಾಳೆಬಹೆನೆಂದು ಮತ್ತಾ ।
ಬಾಲರನೋಡುತ್ತಾ । ಲೀಲೆಯಿಂದ ಮುದ್ದುಮಾಡಿ ಕಾ
ಲಿಗೆರಗಿಸಿದಾ

ರಾಗ ನೀಲಾಂಬರಿ. ಜಂಪೆತಾಳ.

ನಾಳೆಬಹದು ಬದ್ದವೇನೈಯಾ । ಮುನಿನಾಥ ಬೇಸರ್ವೆ
ನ್ರು ಹೇಳೈಯಾ ‖ ೧ ‖ ನಾವು ಸಂಗಡ ಬಂದರಾಗದೇ ಅಲ್ಲಿ ।
ನೀವು ಹೋಗವೆ ಹೊತ್ತು ಹೋಗದೇ ‖ ೨ ‖ ತರಳರೂರುನ
ಡೆವದೆಂತಲ್ಲಿಗೆ ಸುಮುನಿ ನಿರಿ ನಾಳೆಬಹೆನು ನಾನಿಲ್ಲಿಗೆ ‖ ೩ ‖ ವ
ರೊಬ್ಬತ್ತಿರ್ರುಗಾದಿರಡ ವಿಯಾಕುಶ । ದರ್ಭೆಯಾ
ತರಬ್ಯಾಡಗೊಡವೆಯಾ ‖ ೪ ‖ ಯಿಬ್ಬರುಜೋಡಾಗಿಯಿ
ರಯಂದೂ ಮುನೀ । ತಬ್ಬಿಬಿಳ್ಕೊಟ್ಟು ನಡದನಂದೂ ೫

ವಾ. ತೆರಳಿದನು ಮುನಿಯತ್ತಲಾ ಕುಶ, ವರವಿಪಿನ
ಡೆಗಿತ್ತಲಾ ಲವ । ತರಳರೊಡನಾಡುತ್ತಲಿರಲಾಶ್ರಮಸ
ಮಾಪದಲೀ ‖ ಯಿರುತ್ತಿರಲು ಲೀಲೆಯೊಳಯೋಧ್ಯಾ । ಪು
ರದವೃತ್ತಾಂತವನು ಪೇಳ್ವೆನು ಧರಣಿಪತಿ ರಘುನಾಥಜನ

ಹತ್ಯವನು ಕಳೆಯಲ್ಕೇ

ರಾಗ ಕಾಂಬೋದಿ. ಜಂಪೆತಾಳ.

ಅಶ್ವಮೇದವರಚಿಸಬೇಕೆಂದು ಶ್ರೀರಾಮಭೂಶಾಶ್ವತದಿ ಸಂನಹವತರಿಸೀ । ವಿಶ್ವಾಮಿತ್ರಾದಿಗಳನೆರಹಿ ಶಾಲೆಯ ರಚಿಸಿ । ವಿಶ್ವನಾಯಕ ದೀಕ್ಷೆಗೊಂಡಾ ॥ ೧ ॥ ಮತ್ತಲ್ಲಿ ಕುದರೆಯನು ತರಿಸಿ ಶೃಂಗರಿಸಿ ಶಾಸ್ತ್ರೋಕ್ತದಲಿ ಪೂಜೆಯನು ಮಾಡಿ । ಉತ್ತಮದ ಬಿರಿದುಗಳ ಬರದು ಕುದರೆಯ ಫಣಿಗೆ ಕಟ್ಟಿದರು ಮಂತ್ರವಿಧದಿಂದಾ ॥ ೨ ॥ ಆ ನೆ ಕುದರೆ ವರೂಥ ಸೇನೆ ಮೊಬ್ಬಲ ಸಹಿತ ತಾನೆ ತೆರಳಿದನು ಶತೃಘ್ನ । ನಾನಾ ಸುವಾದ್ಯರವ ಗಾನ ನೃತ್ಯಗಳಿಂದ ಆನಂದದಿಂ ಪೊರಟ ಪುರವಾ ॥ ೩ ॥ ಅಂಗ ಕಾಂಬೋಜ ಕರ್ನಾಟ ಮೊಳವ ಗೌಳ । ವಂಗ ಮಳೆಯಾಳ ದ್ರಾವಿಡರಾ । ಸಂಗರದಿ ಕಾದಿ ಭೂಮಿಪರನೆಲ್ಲ ರಗೆಲಿದು । ಹಂಗದವರೊಳು ಕಪ್ಪಗೊಂಡ ॥ ೪ ॥ ಚಪ್ಪಂನ ದೇಶದೊಳಗಿಪ್ಪ ರಾಯರನೆಲ್ಲ । ಕಪ್ಪವನು ಕಳದು ಘರವರಿತೂ । ತಪ್ಪದಾ ಮುಂದಿ ಕುದರೆಯು ಸಹಿತ ವಾಲ್ಮೀಕಿ । ಯಿ ಪಾಶ್ರಮಕೆ ಬಂದರೆಲ್ಲಾ ॥ ೬ ॥ ಯತ್ತಣ ತುರಂಗವಿದು ಪೊಕ್ಕುಪುದೆ ತೋಟಗಳ । ಕತ್ತರಿಸಿ ಕೆಡಹುತೆಂದೆನುತಾ । ಚಿತ್ತದಲಿ ಕೋಪಿಸುತ । ಹತ್ತಿರಕೆ ಬಂದದರ ಮಸ್ತಕದಲಿಖಿಯನೋಡಿದನೂ ೭

ರಾಗ ಭೈರವಿ. ಜಂಪೆತಾಳ.

ವೀರವಿತರಣ ಶೂರವಿಜಯಸದ್ಗುಣಸಾರ । ಸಾರ ಸಾಂಬ ಕಧೀರ ಶರಧಿಗಂಭೀರಾ ॥ ಪ ॥ ವೈರಿಮದಗಜ ಸಿಂಹ ವಾಸವಾರ್ಜಿತ ಧರ್ಮ । ಪಾರುಷಾಗ್ರಣಿ ರಾಮ ಪರಮನಿಸ್ಸಿಮಾ ॥ ೧ ॥ ಈ ತನೆಲ್ಲದ ಕುದರೆಯಿದರ ಕಟ್ಟಿದರೀಗ । ಭೂ

ತಳದೊಳವಜಾಣಭುಜಬಲತ್ರಾಣಾ ॥೨॥ ಹೀಗೆಬರದಿಹ ಬರಹವ್ನೋದಿನೋಡಿದಲವನು । ಮೂಗಿನಲಿಬೆರಳಿಟ್ಟು ತೂಗಿದನುಶಿರವಾ 3

ರಾಗ ಶ್ರೀರಾಗ. ಅಟತಾಳ.

ಸೀತಾನಂದನನೂ ವಾಲೆಯನೋಡಿಂನ್ಯಾತರಬದುಕೆಂದಾನೂ।ಭೂ ತಳದೊಳಗೋರ್ವಖ್ಯಾತನಾದನುವೇಲೆ। ಪೇತುಗಳೆಂತೆಂಬವಮಾತುಬಂತೆವುಗೇ ॥ಪಲ್ಲ॥ ಬಂದುದೆಲ್ಲವುಬರಲೀಈಪ್ರಾಣವು । ಯಿಂದುಹೋದರುಹೋಗಲೀ।ಮುಂದರಿಯಲುತಾಯಿಮುನಿಕೋಪಿಸಲುಬಿಡೆ।ನೆಂದುಹತ್ತಿರೆಬಂದುನಿಂದುನೋಡಿದನೂ ॥೧॥ ಮರನಬಳ್ಳಿಯತೆಗದಾಆಕು। ದರೆಯಕೊರಳಸಂದಿಗೆಬಿಗಿದಾ । ವರಕದಳಿಗೆಕಟ್ಟಳರಸೂಗಳದಕಂಡು । ಪರಿಹಾಶ್ಯವಲ್ಲೆಂದು ಋುಷಿಯಬಾಲಕರೂ ॥೨॥ ಮನದಿಹೂಂಕರಿಶಿದನೂ ಕೈಯೊಳ್ಯಗಿದ್ದಧನುವಝೇಂಕರಿಸಿದನೂ।ಅನುಮಾನವೇನೆಂದುಶತೃಘ್ನತಾಬಂದುತುರಗಾವಬಿಡುಯೆಂದರೆ ನಸುನಗುತಾ 3

ರಾಗ ಆಹಿರಿ ಜಂಪೆತಾಳ.

ಕಂಡುಬೆರಗಾದರಿವರೆಲ್ಲಾ।ಯಿವನದಿಂಡುತನಕಿದಿರಿಲ್ಲ ನೋಡಿದರೆಬಾಲಾ । ಮುದ್ದುವೊಖಮುಗುಳ್ನಗೆಯುಮುನಿದವರೊಡನೆಹಗೆಯುತಿದ್ದಿದಕಿರೀಟಗಳುತರತರಡಮಕುಟಗಳುಬುದ್ಧಿವಂತರನಡತೆಯೂ। ಬಲ್ಲತನಗಳನುಡಿಯುವಿದ್ಯವನುಕಲಿತಬಾಯ್ದೆರೆಯೂ । ಕೈಯೊಳಿರ್ದ ಧನುಶರವೆಸವನೂತನದಬಗೆಯೂ। ಕಂಡುಬೆರಗಾದರಿವರೆಲ್ಲಾ ॥೧॥ ಕಡಿದಆನೆಯಕರವೆ। ಹೊಡದಕುದರೆಯಶಿರ

ವ ಬಡಿದವೂವ್ರುತರೆದೆಯ । ತಡದ ವೂವ್ರುತರ ಬದಿ
ಯಾ ಶಿ ಡಿದವ್ಯೈರ ಕ್ತದೊೀಕುಳಿಯೂ ಖ್ಯಾತಿವ ಡವರ
ಣಾಂಗಣದ ಪಾರುಷದಬಗೆಯಾ ೨

ವ. ಇಂತು ವೂರ್ಬಲವನ್ನು ಜನ ಹಾನಿಯನ್ನು
ವೂಡಲಾಗಿ ಶತ್ರುಘ್ನ ತಾನೆ ಬಾಲಕನ ಬಳಿಗೈದು ಮ
ತ್ತಿಂತೆಂದನೂ ... ...

ರಾಗ ಶಂಕರಾಭರಣ ಅಟತಾಳ

ಆರಕಂದಾನ್ಯೆಯನೀನುಅಂಜಿಕಿಲ್ಲಾದೇಇಂಥಾ। ಘೋ
ರಕಾಡೊಳೊಬ್ಬಬಂದುಅಶ್ವಕಟ್ಟಿದೆ ॥೧॥ ಕಟ್ಟಿದರೆನಾ
ಯಿತೈಯಾ ।ದಿಟ್ಟನಾದರೆಯಿದರ । ಬಿಟ್ಟುಕೊಂಡೋಗು
ವಧೈರ್‍ಯ । ಅಷ್ಟುಂಟಾದರೆ ॥೨॥ ನಾಡರಾಯಾನೆಂದು
ವೂತಾನಾಡ । ಬ್ಯಾಡವ್ರೋನಿನ್ನ । ಕೂಡೆ ಯುದ್ಧವೂ
ಡುವಾದುಫರವಲ್ಲವ್ರೋ ॥೩॥ ಬ್ಯಾಡಬ್ಯಾಡಾನಿನಗಿಷ್ಟು
ಪಂತಾಪಂನೊಳೂಅತ್ತಾ । ನೋಡಬಾರದೆಬಿದ್ದವರ್‍ಯಾ
ರುನಿಂವೋಳು ॥೪॥ ಮಕ್ಕಳುಸಂಣಾವನೆಂದುಬಿಟ್ಟಾರೆ
ನಿಂನಾಯಿಂತಾ । ಸೊಕ್ಕೀನವನೆಂದುತಿಳಿಯಲಿಲ್ಲಾವ್ರೊ
ಮುಂನಾ ॥೫॥ ದಕ್ಕಾದು ದಕ್ಕಾದುಬಿಡುಧರ್ಮವಲ್ಲಾ
ವ್ರೋನಿನಗೆ। ತಕ್ಕ ಬುದ್ಧಿಯಾಹುದಿಂನು ತಡವಿಲ್ಲಾವ್ರೋ ।

ರಾಗ ಶಂಕರಾಭರಣ ಮಟ್ಟತಾಳ.

ನಿಲ್ಲುನಿಲ್ಲೆಲೊನೀನುಸಮರಕೇ । ಬಲ್ಲೆನಿಂನಬಗೆಯು
ನೆಂದು।ಘುಲ್ಲವಿಸಿದನೂ॥ಪ॥ ನೋಡಿಲವನನೂ ।ಹೂಡಿ
ಶರವನೂಕೂಡೆ।ಕೂಡೆಬಿಡಲುಕಡಿದಾಡಿಬಿಸುಟನೂ॥೧॥
ಮತ್ತೆಬಂದರೂ ಖಡ್ಗವೆತ್ತಿನಿಂದರೂ । ಸುತ್ತಮುತ್ತಕವಿ
ದುಬಾಲನಮುತ್ತಿಕೊಂಡರೂ ॥೨॥ವಬ್ಬರಿಸಿದರೂಲವನ

ಇಬ್ಬರುತಿವಿದರೂ। ಸರ್ಬಬಲವವುಸುಕಿಪೆಟ್ಟನ। ಹಬ್ಬವಾಯಿತೂ ॥೩॥ ಶೀತೆಯಣುಗನುವೈಯ। ಧಾತುಗೆಟ್ಟನೂಭೂತಳಕ್ಕೆ ಮೂರ್ಛೆಯಾದನಾ ತರಳನೂ ॥೪॥

ಭಾ. ಗರುಡದೇವನಗರಿಯನುರುಭೆಗೆ। ವುರಗನಿದಿರೆಸುತ್ತಮುತ್ತಿಂ । ದಿರುವಭಟರಿದಿರಿನಲಿವುಲ ಗಿದಲವನು ಮೂರ್ಛೆಯುಳೀ ॥ ತರಳನನುಕೈಕಟ್ಟಿರಥದೊಳ । ಗಿರಿಕುದರೆಯಬಿಡಿಸಿಕೊಳ್ಳಲು । ಮುರಳಿತಾಪಸನಟುಗಳೈತಂದೆಂದರವನಿಜೆಗೇ ೧

ರಾಗ ಸೌರಾಷ್ಟ್ರ. ತ್ರಿಪುಡೆ.

ಬ್ಯಾಡವೆಂದರೆಮಾತಕೇಳದೆ। ನಾಡಪಾಲರಯಜ್ಞದಶ್ವವ। ಕಾಡಬಳ್ಳಿಯತೆಗದುಕಟ್ಟಿದನೋಡುಲವನಾ ೧

ಚೇಡಿಕೊಂಡಳುತರಳ ನೆನುತವೆ। ರಾಡಿದವೂತುಗಳ ಕೇಳದೆ। ಮಾಡಿದ ಸುಯುದ್ಧವನ್ನು। ಖಾಡಾಖಾಡಿ ನಿಂದಾ ॥೧॥ ಅಷ್ಟದಿಕ್ಕನೊಳ್ಕವಿದುಬಾಲಗೆ। ಬಿಟ್ಟುಬಾಣವಕಪಗೆಹೆಡವುಡಿ। ಕಟ್ಟಿರಥದೊಳಗಿಟ್ಟುವೈದರುಪುರಕೆಭರದೀ ॥೨॥ ಕೇಳುತಾಕ್ಷಣದೊಳಗೆತನ್ನಯ। ಬಾಲಕನಭಂಗವನ್ನುಧಾತ್ರಿಯ। ಮೇಲೆತಾತಲೆತಿರುಗಿಬಿದ್ದಳುಲೋಲನಯನೆ ೩

ರಾಗ ನೀಲಾಂಬರಿ. ಜಂಪೆತಾಳ.

ಕಂಜಲೋಚನಾಕಾರುಣ್ಯಂಬುಧೀ। ಮಂಜುಳಾಕರಾಮಾರಾಸಂನಿಭಾ ॥೧॥ ಚಕ್ರಧಾರಣಾವಿಕ್ರಮಾರಾಣಾಚಕ್ರಪಾಲಕಾ। ಸುಪ್ರಸುಪ್ರಭಾ ॥೧॥ ದೇಶಕೋಶವುಬಿಟ್ಟುನಾವನಾ। ವಾಶಿಯಾದೆನೂ। ಲೇಸಕಾಣೆನೂ ॥೨॥ ಯೀಕಾಡಿನಲ್ಲೀವಾಲ್ಮಿಕಿಮಹಾ ಮುನಿಯುಸಾಕಿದಾಮ

ಕ್ಕಳೆಸಲಹಿದಾ ॥೩॥ ಆತನಿಲ್ಲಾದಾರೀತ್ರಿಯಾಲವಾ ।ಯಾತಕ್ಕೈದಿದಾವಮಾತಕೇಳದೆ ॥೪॥ಯಿಲ್ಲವೈಕುಶಾವುಲ್ಲಸಾಹಸಾ । ಯೆಲ್ಲಿಗೈದಿದಾವುಲ್ಲಸಾಹಸಾ ॥೫॥ ಖುಲ್ಲರಾಯರೂಕೂಡಿದಾವರೂ । ಯಿಲ್ಲಿವೈವರೆಂಕೊಲ್ಲು ವರೇನೊ

ಬೆರಳನುರೆವುುರುಟಿ ಬೆಂಡಾಗಿಬಸವಳಿದುವಿಂಗೆ। ತರಳನಾಪತ್ತಿಗೋಸುಗ ।ಮರುಗವಾಗಕುಶವಂಪೊತ್ತುಕೊಂಡ್ಯೊದುಜನನಿಯೊಡನಿಂತೆಂದನೊ

ರಾಗ ಸವುರಾಷ್ಟ್ರ. ಯೇಕತಾಳ.

ಚಿಂತ್ರಿಸುವದ್ಯಾತಕೆಪೇಳಂಮ್ಮೆಯಾನಿವು।ಗಿಂತದುಃಖಬಂದುದ್ಯಾತಕಂಮ್ಮೆಯಾ । ಅಂತರಂಗದಂತರವೆನಂಮ್ಮೆಯಾಚಂದ್ರ।ನಂತೆವುುಖಕಂದಿದ್ಯಾತಕಂಮ್ಮೆಯಾ ೧॥ ಕಂಣನೀರುತುಂಬಿದ್ಯಾತಕಂಮ್ಮೆಯಮ್ಮೆಯ। ಬಂಣಗುಂದಿತಂಣಗಿಹುದ್ಯಾತಕಂಮ್ಮೆಯಾ ॥೨॥ ಬಂಣೇಸುನೀಯುಂಣೆಸಾದಿರಂಮ್ಮೆಯಾವುು। ಕ್ಕಂಣನಾಣೆ ಅಂಜದೀರುಅಂಮ್ಮೆಯಾ ೩

ರಾಗ ಆನಂದ ಭೈರವಿ. ಆದಿತಾಳ.

ಆವರಾಯರುನಾನರಿಯೆ ಕಂದಾ ಕಂದಾ । ನಾವಿಲ್ಲಿರುವ ಠಾವಿಗಾಗಿಬಂದರಂತೆಕಂದಾ ಕಂದಾ ॥೧॥ ಕೋವಿದಶ್ವತಂದರಂತೆಕಂದಾ । ಕಂಡದರಲವನುಬಿಡದೆಕಟ್ಟಿಕೊಂಡನಂತೆಕಂದಾ ಕಂದಾ ॥೨॥ ಹೆಂಮೆಯಿಂದವಮಾತನಾಡಿಕಂದಾ ಕಲಹಾವಬಯಸಿ । ಗಂಮನೆಶರವಬಿಟನಂತೆ ಕಂದಾ ಕಂದಾ ॥೩॥ ಸುಮಾತ್ರನದಿಮುತ್ತಿಕೊಂಡು ಕಂದಾ । ಕೈಕಟ್ಟನಿಂನಾ ತಂಮಾನಕೊಂಡ್ಯೊದರಂತೇ ಕಂದಾ ಕಂದಾ

ರಾಗ ಕೇತಾರಗೌಳ ಅಟತಾಳ.

ಅಂಬನೀಚಿಂತಿಸಬ್ಯಾಡಆದರೇನು ಬ್ರಹ್ಮಲಿಖಿತತಪ್ಪದೆ । ಸುಂಮಾನೆಮರುಗಾದಿರಾಲವನೊಬ್ಬದಾವಬೊಮ್ಮನಪಿತನಾಗಲಿ॥೧॥ಇಂದ್ರಅಗ್ನಿಯಮವರುಣವಾಯುಕುಭೇರ।ಸಾಂದ್ರದಿಕ್ಪಾಲಕರಾಮಂದೀರದೊಳಗಡಗಿಸಿದ ರಿಯುಂನನುಜಾನತಂದುತೋರುವೆನುತಾಯೆ॥೨॥ಲೋಕನೆಮುಳುಗಾಲಿ।ನಾಕವೆಬೀಳಾಲಿರಾಕೇಂದುಧರಮುನಿಯೆ। ಶ್ರೀಕಾಂತನಾಣೆತಪ್ಪದರೆಯಂನನುಜಾನತಾಕರತರುವೇ

ವ. ಯಿಂತೆಂದುಭಾಷೆಯಪೇಳ್ದಕುಮಾರಂಗೆಹರಸಿವಜ್ರಸೀಸಕವಂತೊಡಿಸಿಮಂಗಳವಚನದಿಹರಸಿಆಶೀರ್ವಾದಮಂಮಾಡಿದಳಾದೆಂತೆನೇ

ರಾಗ ಮುಖಾರಿ. ಜಂಪೆತಾಳ.

ಸ್ಥಿರಂಜೀವಿಯಾಗಿಸ್ಥಿರವಂತರಾಗೀ । ವರದರಾಗೆನುತಸೇಸೆಯನಿಟ್ಟಳೂ ॥ಪಲ್ಲವ॥ ಹಗೆಯವರಕೊಡೆನಿಜವನು ಪೇಳದಿರುಮಗನೆ । ಅಗಲದಿರಿರಣಮಧ್ಯದೊಳಗೀರ್ವರೂ । ಖಗಮೃಗಂಗಳಕೋಟಲೆಗೆಯಚ್ಚರಿಕೆಯೊಳಿರಿ। ಜಗವುಳ್ಳತನಕಬಾಳಿರಿಯಂದಳೂ ॥೧॥ ಹಿತಶತ್ರುಗಳಕೂಡೆಅತಿಸ್ನೇಹಮಾಡದಿರಿ ।ಅತಿಮಿತ್ರರೊಡನೆಸ್ನೇಹಿತರಾಗಿರೀ। ಸತತಹೋದಲ್ಲಿವಳ್ಳಿತಕೊಡಲೆಶಿವನೆನುತಸತಿಯೆತ್ತಿದಳುಸುತನಮಸ್ತಕವನೂ

ದ್ವಿ. ವಾಲಿಕೀಕಿಮುನಿಪದವಮಂಮಧ್ಯಾನಿಸುತಾ । ನಿರ್ಮಲದಿಅಷ್ಟದಿಕ್ಕುಗಳಿಗೊಂದಿಸುತ್ತಾ । ಅಂಮಜಾನಕಿಗೆರಗಿಆಕ್ಷಣವೆಬಂದಾ । ತಮ್ಮಲವನನುಕಾಂಬಕಡುತವಕದಿಂದಾ.

ರಾಗ ಮುಖಾರಿ. ಯೇಕತಾಳ.

ಯೇನಾನೆಂ ಬೆನುಕು ಶನಾಶೌರ್‍ಯವಾ । ಆ ಸೇನೆಯ ಮೇಲೆಬಿದ್ದುಶೆ ಣಸೂವ ಶೌರ್‍ಯವಾ ॥೧॥ ತಡದಾಓಡಿ ಹೋಗುವ ಸೇನೆಯಾ। ಬಿಡದೆಕಡಿದಮುಂದ್ವರಿದವು ದ್ದಾನೆಯಾ। ಕಡೆಗೆಕೆಡ ಹಿ ಶತೃಘ್ನನಂನು ಬಿ ಡಿ ಸಿಕೊಂ ಡಾನುಲವನಾ ॥೨॥ ಬಿಟ್ಟತಂದಾನುತಿರುಗಾವಾಜಿಯಾಬಿ ಡದೆ। ಕಟ್ಟಿತಂದಾನೂ ಮುಖದತೇಜೆಯಾ। ಕುಶನಧಿಟ್ಟ ತನಕೆಸುರರುಪುಷ್ಪವೃಷ್ಟಿಯ ಗರೆಯೇ ೩

ವಾ. ಹರಿಹರರು ತಾವಿಬ್ಬರೆಂದಾಗಿಕಾದಿದರೆ। ದುರದೊಳಗೆಯಿದಿರುನಿಲ್ಲುವರುಂಟೆಭೂಪಾಲ। ತರಳರೀ ರ್ವರುತಂವೊಳೇಕವಮಥವಾಗಿಕಾದುವಡರಿದುವೂಸ ಮುಯದೀ ॥ ಮಡುಳು ತನದಿಂದ ಯಿದಿರಾದಶತೃಘ್ನನಂ। ಪರಿವಾರಸಹಿತಸುರಪಟ್ಟಣಕೆಕಳುಹಲಾ। ಚರನೋ ರ್ವನೈತಂದು ರಾಮಚಂದ್ರನಕೂಡೆಕರವ ಮುಗಿದಿಂತೆಂ ದನೂ

ರಾಗ ಭೈರವಿ. ಜಂಪೆತಾಳ.

ವಿಶ್ವನಾಯಕಕೇಳು।ಅಶ್ವಮೇಧದಕುದುರೆ।ವಿಶ್ವತಂ ತ್ರದಿಪೋಗಿಸಕಲಲೋಕಗಳಾ ॥೧॥ ಅರಸರೆಲ್ಲರ ಗೆಲಿದುಚಿ ಲ್ಲಿಕಪ್ಪವಕೊಳದು। ಬರುತಿರಲು ವಾಲ್ಮೀಕಿಮುನಿ ಪನಾ ಶ್ರಮದೀ ॥೨॥ ತರಳರೀರ್ವರುಕಂಡುತಡದರೀಕುದರೆ ಯನು। ಸರಳನೆಸದೆಲ್ಲರನ್ನುಸಾಕುಮಾಡಿದರೂ ೩ ಬಾಣವೆಸೆಯಲ್ಕವರತಾಪ್ರಣಕ್ಕೆಜೋಡಿಲಾ। ಪ್ರಾಣವುಳಿ ದವರಗೀ ರ್ವಾಣನೇಬಲ್ಲ ॥೪॥ ಮಕ್ಕಳಾಟಿಕೆನಮಗೆಮಾರಿ ಯಾಯಿತು ಕಡಗೆ। ವಕ್ಕಣಸಲಿಂನೇನುಶತೃಘ್ನನಿರವಾಕ

ರಾಗ ನೀಲಾಂಬರಿ. ಜಂಪೆತಾಳ.

ಕೇಳಿವಮೂರ್ಛಿತನಾದರಾವೂತಂನವರು । ಕಾಳಗ
ಕೊಳಗೆ ಮಡಿದ ವೃತ್ತಾಂತವಂನೂ ॥ ಮುಖ ತುರಗವೂ
ರ್ಲವುಸಹಿತಾಶತೃಘ್ನ । ಅಖಿಳಸೇನೆಯನೆಲ್ಲಾ ಅರಸು
ಗಳಗೆಲುತಾ ಕಡೆಗೆ । ಸಕಲಸೇನೆಯ ನೆಲ್ಲಾ ಬಾಲಕರುಗೆ
ಲುತಾ ೧

ರಾಗ ಕಾಪಿ. ಅಟತಾಳ.

ರಣಕೆಸಂನಹವಾದರೆಲ್ಲಾ ಲಕ್ಷ್ಮಣನು ತನ್ನಪಜಯವ
ನುಕೇಳ್ದಿಸೊಲ್ಲಾ ।ಛತ್ರಚಾಮರಪತಾಕೆಗಳೂ । ಸುತ್ತ
ಮು ತ್ತಾಲು ವಾದ್ಯತಂವಟಭೇರಿಗಳೂ । ಯತ್ತಾಲು
ಕುದರೆವೆಂದಿಗಳೂಸುಭ । ಟೊತ್ತಮುಕ್ಕೆಯಾ ಿಬತ್ತಿ
ರಾಯುಧವೂ ॥೧॥ ಯಿಾಡಾದರಥವಹತ್ತಿದರೂ ಮುಂ
ಕಿಜೊತ್ತುಜೊತ್ತಾಗಿಕುದರೆಯನೊತ್ತಿದರೂ । ನೋ
ಕಲವೆನವುಂತ್ತಿದರೂ ವನವನೋಡುತ್ತ ಕಾಡುಕಾಡೆ
ಗ್ಗಸುತ್ತಿದರೂ ೨

ವ. ಈ ಪರಿಯಲ್ಲಿ ಸವುಮಿತ್ರನಬಲಬಂದು ಮುಸುಕ
ಲು ಕುಶಲವರು ತಂವೊಳುತಾವೆವೂ ತಾಡಿದರದೆಂತೆನೇ

ರಾಗ ತೋಡಿ. ಆದಿತಾಳ.

ನೋಡಿದೆ ಯಾತವೂಕ್ರನೋಡಿದೆಯಾನಂಮ । ಕೂ
ತರಣದೊಳುಯುದ್ಧಮಾಡಲುಬಂದಂಥಫ ಡೆಯಾನೋ
ದೆ ಯಾ ॥ ಪ॥ ಹೊದಲಿನಾವುಕಟ್ಟಿಕೊಂಡಾಕುದರೆಗಾ
ಶೆಣಸಿದವರು । ಸದದುಹಾನಾಹಾನಿಯನ್ನುಮಾಡಿದ
ಿೀಲೆ । ಅದರೊಳೋರ್ವತಪ್ಪುಹೋಗಿವದಗಿವೂರಿಗೈದಿ
ುತ್ತೆ । ಬದಲುಫಡೆಯನೆರಹನಂವೊ । ಿದಿರುನಿಲುವ

ಚೆದುರಭಟರು ॥೧॥ ಯತ್ತೆಂದಾ ಬಂದೂದೊಭೂ ।
ಪೋತ್ತಮ ಪೂರ ಮುಂದಿ ಕುದರೆ । ಕತ್ತಾಲೀಗಳ್ ಬಂದು
ಸೂರ್ಯನ ಮುತ್ತೀದ ಹಾಗೆ । ಬತ್ತೀಸಾ ಯುಧಂಗಳೂ
ತಂಮ ಹಸ್ತದಲ್ಲಿ ಬಿಡಿದುಕೊಂಡು । ಸುತ್ತಾಲು ನಂವೊಡನೆ
ಬಿತ್ತ । ಪೆತ್ತಿ ಬಾಹ ಚೆದುರಭಟರಾ ನೋಡಿದೆ ಯಾತಂಮ
ನೋಡಿದೆಯಾ ॥೨॥ ಅಬ್ಬರೀಸಿ ತಂಪೊಳುತಾ । ಬಿಬ್ಬ
ರುಮಾತಾಡಿಕೊಂಡು । ಮಾರ್ಬಲದೊಳಗೆ ಪೊಕ್ಕು । ಆ
ರ್ಭಟಿಸುತಾ ಬಿಟ್ಟ ಬಿಟ್ಟ ಬಾಣವ ಬಂ । ದಟ್ಟ ಮುಂದಿ ಕುದ
ರೆಗಳನು । ಕುಟ್ಟಿ ಕುಟ್ಟಿ ತಲೆಯ ರಣದೊ । ಳೊಟ್ಟಿ ತೀರ್ದ
ರಾಕ್ಷಣದೊಳೂ ॥೩॥ ಬಂದಾಬಂದಾ ಬಲವನೆಲ್ಲ ಕೊಂ
ದುಕೊಂದು ಬಿಸುಟ ಮೇಲೆ ನಿಂದಾ ಲಕ್ಷ್ಮಣನು ಕಾದಲೆಂ
ದು ಹರುಷಾದೀ । ವಂದೆ ಬಾಣವೆಸೆಯಲಾ ರಥದಿಂದ ಮೂ
ರ್ಛೆಯಂನು ತಳೆದು ಅಂದಾವ ಶಾಣುತ್ರ ಸೂರವೃಂದಾ
ವೃಷ್ಟಿಗಳಾಲಾಕ್ಷಣದೀ ೪

ವಾ. ಧರೇಶಲಾಲಿಸೈ ತದ್ಳರೊಳ್ ಲಕ್ಷ್ಮಣಂ । ಯಿ
ರದೆ ಮೂರ್ಛೆಯ ತಳೆದ ಸಂಗತಿಯನೆಲ್ಲಮಂ । ಚರನೋ
ರ್ವನೈತಂದು ರಾಮ ಚಂದ್ರನಕೂಡೆ ವಿಸ್ತಾರದಿಂದುಸು
ರಲೂ ॥ ಹರಹರಾಯೆನುತ ಲಕ್ಷ್ಮಣನು ಮಡಿದನೆಯೆಂದು
ಬೆರಳ ಮೂಗಿನೊಳಿಟ್ಟು ಸಿರವಂನು ತೂಗುತ್ತ । ಧರ
ಯೊಳ್ ಬಾಪರಿಯಾಯ್ತೆ ಹಾ ವಿಧಿಯೆಯನ್ನುತ್ತ ವುಸು
ರಿಧಂ ಹಲವಂಗದೀ

ರಾಗ ನೀಲಾಂಬರಿ. ಯೇಕತಾಳ.

ಲಕ್ಷ್ಮಣಾನೆರವು ದಾತ್ರಾತಾ ಪಾಯಿ ಹ್ಯಾಕೊಲಾದೀ ಪಾ
ಯಿಪಾಕ್ಷೀ ತಿಯೊಳ ಳಿದ ಮೇಲೆದೀಕ್ಷೆ ಯಾತಕಿನ್ನು ॥೧॥ ಚ

ಹಾಕ್ರಿದಿದೇವರ್ಕಳೊಳು ತಂಮಾ ಗೇಣೆಯುಂಟೆ । ನಂ
ಮಾಶ್ರೈಯರ್ ತಗ್ನಿಕ್ಷತ್ರಿಧರ್ಮರ್ಕೆಟ್ಟತ್ರಿಂನೊ ॥೨॥ ಕರಾಕ್ರ
ಮಶ್ರಾವಲ್ಲದಿಷ್ಟ । ಮಮಾರ್ಬಾರದೆಲ್ಲಾ । ಸುಂಮಾಕ್ರಿಕಾ
ಳುಹಿಮೋಸನಮಾಗಾಯಿತಾಲ್ಲಾ ... ೩

ರಾಗ ನೀಲಾಂಬರಿ. ರೂಪಕತಾಳ.

ಯಾರಿಗೆಪೇಳಲಿನಾನೊಯಿರಾವಿಷ । ಮಾಗತಿಗಿಂನುಸೊ
ಸುಗಳಿಂದಲಿಮಂಕ್ಷಕೆಪ್ರೊಸವ್ರಬಂತಲ್ಲಾ ॥೧॥ ಯಾತಕೆತೊ
ಡಗಿದೆ ಯಜ್ಞವಿಂ ನ್ಯಾತ ಕೆಕ ಳುಹಿದೆ ಅನುಜರ । ಯಾ
ತಕೆತಡ ದರೊತರ ಳರಿನ್ಯಾತ ಕೆಕಾದಿದರೋ ೨
ಯಾತ ಕೆಮಡಿದರೊ ಅನುಜರು । ಯಾತ ಕೆರಾಜ್ಯ
ವುನಮುಗಿಂನ್ಯಾತ ಕೆಧೊರೆತ ನವೆಂಬುದಿನ್ಯಾತಕೆ ಶಿವ
ಶಿವನೇ ॥೩॥ ಶರಧಿಗೆ ಸೇತುವಗಟ್ಟದೆ ಸರ್ವರಿಗುಸರಿಯ
ನಿಸಿದೆ । ಧುರದೊಳುದೃಷ್ಟರಶಿರಗಳ । ತರಿದೆನುರಾಕ್ಷ
ಸರಾ । ಪರಶುರಾಮನಗರ್ವವಪಂತಗಳನುಹಿಂಗಿಸಿದೆನು
ಯಿಾ । ತರಳರುಮಂಕ್ಷಕೆಮತ್ತಾದುರುಳರೊನಾನರಿಯೆ

ಕಂ. ಅನುಜನಕೇಡಿಂಗೋಸುಗ । ವನಜಾಂಬಕ
ಚಿತ್ತದಲ್ಲಿಮರುಗುತ್ತಿರಲಾ ॥ ವಿನಯದಿಕ್ಸೈರಾತ್ರಜನಡೆ
ತಂದನುನಯದಲಿನುಡಿದನಾಗರಘುಜನೊಳುಂ

ರಾಗ ಸೌರಾಷ್ಟ್ರ. ತ್ರಿಪುಡೆತಾಳ.

ಅಣ್ಣಚಿಂತಿಪಕಾರ್ಯವೇನಿದು । ಬಣ್ಣಗಾರರವಾತಿದ್ಯಾ
ತಕೆ । ಪುಣ್ಯನಿಧಿಲಕ್ಷ್ಮಣನ ಕೆಡಹುವಚಿಂಣರುಂಟೇ ೧
ನಾಡನಾತಿಗನೀವುಚಿಂತೆಯ । ಮಾಡಲ್ಯಾತಕೆಪ್ರಸಿಯೊ
ಧಿಟವ್ರಃ ನೋಡಿಬರುವೆನು ಕಳುಹು ತನ್ನನು ಗಾಡದಿಂದಾ
ಅಪ್ಪಣೆಯಕೊಡುಯನುತಯೋಧ್ಯದೊ । ಆಪ್ಪಬಲ

ವನು ನೆರಹಿಕೊಂಡಾ । ಸರ್ಪಶಯನಗೆ ಕರವಮುಗಿದ ಕಂದರ್ಪ ರೂಪಾ ೨

ವ. ಇಂತೆಂದು ಭರತನು ಮೂರ್ಬಲವಂ ಕೂಡಿಕೊಂಡು ಬರುವ ವೇಳ್ಯದೊಳ್ ಕುಶಲವರು ತಂಮು ತಂಮೊಳು ಮಾತನಾಡಿದ ರದೆಂತೆನೇ

ರಾಗ ರೇಗುಪ್ತಿ. ಅಟತಾಳ.

ಭರತಾಸಂಗರಕೆಂದುಬರುತಾನೆಂಬುದಕಂಡೂ । ಅರಿತುಬಾಲಕರಂದುತುರಿತಾಗ್ರಗೊಂಡೂ । ಶರತುದಿಗೇರಿಸಿಪ್ರೈಮರತಿರಬಾರದೆಂದು । ತರಥರದಿಂದಬಾಣವೆಚ್ಚಾರುಯಿರ್ಾರ್ವರೊಂದಾಗೀ ॥೧॥ ಯಚ್ಚಬಾಣವು ಬಂದು । ಕೊಟ್ಟಿತೆಲ್ಲರಿಗಂದು । ಬೆಚ್ಚಿತವರದಂಡುಆಚ್ಚರ್ಯಗೊಂಡೂ । ಯಚ್ಚರಿತು ತಮೊಗ್ರೀಳು। ಹೆಚ್ಚಿದತ್ರಿವಿಕ್ರಾಮಗಳು। ಯಚ್ಚಶರಂಗಾಳಬಂದುಮುತ್ತಿತವರದಂಡೂ ॥೨॥ ಬಾಲಕರ್ಾರಮೊಗದಠೂ ಪಹೊಲುವೆಯಾನುತಾವು ಕಂಡು । ಶ್ರೀಲೋಲರಾಮನರೂಪುಪೋಲುವರೆಂದೂ। ಲೀಲೆಯಿಂದತ್ರಾಶ್ರಿ ಬಂದು । ಪೇಳಲು ಮಾಠುತಿಗಂದುಕೇಳಬೇಕವರನೆಂದುಭರತನೈತಂದೂ 3

ರಾಗ ಮಾರವಿ. ಯೇಕತಾಳ.

ಕಂದನಿಮ್ಮನುಪೆತ್ತ ತಂದೆತಾಯಿಗಳ್ಯಾರು । ಬಂದುದೆಲ್ಲಿಂದನೀವೂ । ಯಿಂಧುನಮ್ಮಯವಾಜಿಕಟ್ಟನಮ್ಮನುಜಾರಕೊಂದಕಾರಣವೆನೂ ॥೧॥ ಯಿಾಧುರದೊಳುಮೊದಲಾದದುಬುದ್ದಿಯುಕಂಡೆನಿಮ್ಮಯಗುಣವಾ। ಕ್ರೋದವಬಿಡಿಹಯವಬಿಟ್ಟು । ತಾಯಬಳಿಗಿಂನಾದಠುನೆಡೆಯಿರಂಣಾ ॥೨॥ ತುಠಗಾವ ಬಿಡಬೇಕಾದರೆಕೆಲಸಗಳುಂಟುಮ

ರುಳರಂದದಿನೀವೂ । ತರಳಾರುತರಳೆರುಯಾರೆಂದುಚೆ
ಸಗೊಂಬುದೀಗಳೀದುರುಳತನವಿದೇನೂ ॥೩॥ ಸಂಗ
ರದೊಳುಬಿಡುಸರಳಸಹಸದಪ್ರಸಂಗವ್ಯಾತಕೆಮರುಳೆ।
ಅಂಗದೊಳಗೆಭಯವುಳ್ಳಡೆನಿನಗೆತುರಂಗದಾಸೆಯನುಬಿ
ಡೂ ॥೪॥ ಹತ್ತುಭರತಗೆನಿಪ್ಪತ್ತುನಳಗೆಮೂವತ್ತು
ಜಾಂಬವಗೆ ಗೈವತ್ತುನಾಲ್ವತ್ತುಅಂಗದಗೆಐವತ್ತು ಸುಷೇ
ಣಗೆಮತ್ತುಮತ್ತಂಬುಗಳ್ಬಿಡುತಕಡಹಿದರುಯೇಸಾ
ನೆಂಬೇ ॥೫॥ ವತಳಿಹನುಮಬಿದ್ದುರಳಿಜಾಂಬವಯುಚೆರಳಿ
ಸುಸೇಷಣನು । ತೆರಳಿದಗವಯನು ವಡಲಿದಶತಬಲಿಛ
ರದಿಂದೆಲ್ಲರುಕಂಣರಳಿ । ಭರತವೈಮರದರಣದಲೀ
ಯೆಸಾನೆಂಬೇ ೬

ವ. ಈ ಪ್ರಕಾರ ಭರತ ರಣರಂಗದೊಳ್ ವೈಮ
ರತುದಂ ಕಂಡು ಚಾರರು ನಡೆ ತಂದು ದುಗುಡದಿಂ ರ
ಘುವರಗೆ ಬಿಂನೈಸಲು ಅದಂಕೇಳ್ದು ರಘುಜ ಯಿಂತೆಂದ
ನದೆಂತೆನೇ

ರಾಗ ಭೈರವಿ. ಜಂಪೆತಾಳ.

ಭರತಸಂಗರದಿವೈಮರತನೆಂಬುದಕೇಳಿ । ಅರಿತು
ಮನದೊಳಗಂದು ತುರಿತಾಗ್ರಗೊಂಡೂ ॥೧॥ ಯಾಗದೀ
ಕ್ಷೆಯನಿಲಿಸಿಆಗಮಂತ್ರಿಯಕರಸಿ । ರಾಘವನುಹೊರಪ
ಯಣನಾದನಾಕ್ಷಣದೀ

ರಾಗ ಆಹಿರಿ. ಜಂಪೆತಾಳ.

ಪುರವಹೊರವಂಟಶ್ರೀರಾಮಾತಂನ । ಪರಿವಾರಸಹಿ
ತಸಂಗರಕೆನಿಸ್ಸೀಮಾ। ಪುರವಹೊರವಂಟಶ್ರೀರಾಮಾ ೧
ಪೊಡವಿಯುಸರದೊಳೈದುಆನೆಗಳಸೇನೆಗಳ । ಯಡಬ

ಲದಿಪಿಡಿದಿರುವದಂತಿಗಳ ಪಂಜ್ತುಗಳ । ನಡುವೆಸಂದಣಿಸುತ್ತಿ
ಹವಾಜಿಗಳತೇಜಿಗಳ ಸಂಗಡೆಬರುವಮಂತ್ರಿಗಳಾ ೨
ಸಿವನಫಣೆಗಂಕೊಪ್ರಳಯದಕಾಲಭೈರವನೊ । ವಿವರಿಸ
ಲುವಡ ಭಾನಳಸೊಯಂಬಂತೆ । ಅವಘಡಿಸಿಚತುರಂಗ
ಮಾರ್ಬಲವ್ರೊಯನುತ್ತಿರಲು ನಿವಹಕುಶಲವರಿಪ್ಪನವ
ಮುತ್ತಿದರೂ ೩

ರಾಗ ಕಾಪಿ. ಅಟತಾಳ.

ಕುಶಲವರಾನುಕಂಡರಾಮಾ । ಸಾಹಸದಿಬಿಲ್ಬಾಣ
ರಂಜಿಸುವನಿಸ್ಸೀಮಾ। ಕುಶಲಾವರನು ಕಂಡರಾಮಾ॥ ಪ॥
ರಣದಿಬಿದ್ದವರನ್ನು ನೋಡೀ ಸತ್ತಹೆಣಗಳ । ತರಿದು ಸುಂ
ಗುವನೊಣಗೂಡಿ। ನೊಣಗಾಳುಕವಿದೊಂದುಗೂಡೀ।
ಲಕ್ಷ್ಮಣಾನಕಾಣು ತಮನದಲಿಚಿಂತೆಮಾಡೀ ॥೧॥ ಭರತಶ
ತೃಘ್ನರಕಂಡಾ ಮನಕರಗಿ ಕಾತರಿಸಿಚಿಂತಿಸಿಮೂರ್ಛೆ
ಗೊಂಡಾ। ಕರಿರಾಥತುರಗಾದ ಕಂಡಾ । ಬಿದ್ದು ಹೊರಳು
ತ್ತಿಕಲುಧಿಟ್ಟವೀರರಮುಂಡಾ ... ೨

ಭಾ. ರಣದೊಳಗೆಸಾಲಾಗಿಮಲಗಿಹ। ರೆಣೆಸುವರೆ
ತುದಿಗಾಣೆಯಲ್ಲಿಯು। ಹೆಣನಮುಝುವೆಮುಯವ್ರುನಾಲಿಕ್ರೀ
ಕಿಮುನಿಪನಾಶ್ರಮದೀ॥ ಗುಣಕೆಹುರುಡೆಜಾಣರೆನುತಲೆ।
ರಣಕೆಸಂನಹನಾದಮಕ್ಕಳೆ। ಕೆಣಕಿಮಾತಾಡಿಸಿದತಂ
ನಯರಾಜನೀತಿಗಳಾ

ರಾಗ ಕೇತಾರಗೌಳ. ಅಟತಾಳ.

ಯಿಂನಾದರುಬೇಡಬೇಡಮಕ್ಕಳಿರಾ ಸಮ್ರತನಿಮ
ಗಲ್ಲಾಯುದುಬಾಲಕರಿರಾ । ಯಿನ್ನಾದರುಬ್ಯಾಡಬ್ಯಾ
ಡಮಕ್ಕಳಿರಾ ॥ ಪ ॥ ಶಿಶುಗಾಳುನೀವ್ರುನಿಮೊಕ್ರಡನೆಕಾಳ

ಗನೆಕೈವಶವಾದರಾಗಲಿ ಆಗದಿದ್ದರೆ ನಿಮ್ಮ ಪೆಸರೇನು ತಂದೆ
ತಾಯಾರು। ಬಿಲ್ಲವಿದ್ಯವಗಲಿಸಿದೀನ್ಯಾವರಾಯಾ ನೀವಿ
ಬ್ಬರು ಜುಪಿಯಾ ಕ್ಷತ್ರ ಮದೊಳಿಪ್ಪ ಹದವೇನು ಮಾ
ಯಾ ॥೧॥ ಮಕ್ಕಳು ನಾವು ನಮ್ಮೊಡನೆ ಕಾಳಗಕೆ ಹೆಂ।
ಮಕ್ಕಳೆಂದದಿರೆ ನಮ್ಮ ನ್ಯಾರೆಂದು ಬೆಸಗೊಂಬುದಕ್ಕೆ ನಂ
ಮೊಡನೆ ನೆಂಟನೆ ನಮ್ಮನು। ಕಕ್ಕುಲಿಕ್ಕೆಗಿಕ್ಕಾಂಬು
ದುಂಟೇ। ಕ್ಷತ್ರಿಯರ ವಂಶಕೆ ನೀತಿಯೆ ಕಾದಲು ಮನಸುಂ
ಟೇ ॥೨॥ ಚತುರ ಸಾಗರವನಾಳುವದೆ ರೆಗಾಳು ನೀವು
ನಿಂ। ಮತ್ತಿ ಕ್ಷಾಯುಬಿರುದು ವಿಶ್ವಾಮ್ರ ಶಾಲಿಯು ದರೊಳು।
ಗತ್ತಿಯಿಲ್ಲದವರು ಸಾಪ್ರಕಾದುವದಕ್ಕೆ। ಮಿತ್ರಯಿಲ್ಲದಿಹ
ರಿ ನೀವು ನಿರುಗೆ ಬಾಣ। ಪ್ರತ್ತಿಯಾಗಿ ಹೊಡಲು ಅರಿಯೇ
ವು ನಾವು ಯಿನ್ನಾದರು ಬಾರೊ ಬಾರೊ ಸಂಗರಕೆ

ರಾಗ ಭೈರವಿ. ಜಂಪೆ ತಾಳೆ.

ಕಪಿರಾಯ ಕೇಳೈಯಾ ಕುಮಾರಕರ ಮಾತುಗಳು।
ನಿಪುಣರಿವರ್ಯ್ಯಾವ ಪುರುಷರಿಗೆ ಜನಿಸಿದರೊ ॥೧॥ ಯಿಾಗ
ಯಿವರೊಳು ಕಾದಿ ಹ್ಯಾಗ್ಯಾಗುವದೆ ಕಾಣೆ। ನಾಗಭೂ
ಷಣ ಬಲ್ಲ ನಟನೆಗಳನೆಲ್ಲಾ ॥೨॥ ಯಿಾ ಹುಡುಗರೊಳು
ರಣದಿ ಸೋತು ಪೋಪುದರಿಂದ ಜೀವವನು ರಣವೊಳಗೆ ಬಿ
ಡುವದೇ ಲೇಸು ೩

ವ. ಯಿಂತು ರಣಕೆ ಸನ್ನದ್ಧನಾದ ಶ್ರೀರಾಮನಂ ಕಂಡು
ಲವನೊಡನೆ ಕುಶನು ಯೇನೆನ್ನುತಿರ್ದನದೆಂತೆನೇ

ರಾಗ ಸವುರಾಷ್ಟ್ರ. ಅಟತಾಳೆ.

ಮೊದಲು ಬಂದವನಂತೆ ಹದಗಾರನಲ್ಲೀ ತನೋಡು ತ
ಮ್ಮಾಯಿಾತ। ನಿದಿರು ನಿಲ್ಲು ವದಕ್ಕೆ ಸದರವಲ್ಲ ನೋಡೋ

ಕನೋಡು ತವಾತ್ರ ॥೧॥ ಬಿಲ್ಲುವಿದ್ಯಂಗಳ ಬಲ್ಲಕೊವಿದನೀತನೋಡು ತವಾತ್ರಮಾತಿ । ನಲ್ಲಿಚದುರಗೆಣೆ ಯಿಲ್ಲಕೇಳ್ನಿನ್ನಾಣೆನೋಡು ತವಾತ್ರ ॥ ೨ ॥ ತುಂಗವಿಕ್ರವರಣ। ರಂಗ ಸಾಹಸನೀತನೋಡು ತವಾತ್ರಸಮ । ರಂಗಾಣ ದೊಳುನವಾತ್ರ । ಭಂಗನ್ನಿಕಾಕ್ಕದೆಜಿಡಾನೋಡ ತವಾತ್ರ ರಾಗ ಶಂಕರಾಭರಣ. ಯೇಕತಾಳ.

ಅಂಣಾ ಸಾಡಿದವಾತಾಲವಕೇಳೀವು । ಕ್ಕಂಣನಂದಿಧೈರ್ಯವನುತಾಳೀ । ಕಂಣಾರೇ ನೋಡಿವನ ಪಾಡೆನೂತಾಯಾ । ಪುಣ್ಯವಿದ್ದರೆಸಡ್ಯವಾದೇನೂ ॥ ಯೆನತಬಿಲ್ಲಿಗೆತೆಬ್ಬವಗದಾನೂತಾಯಿ । ಮುನಿವಾ ಲಿಮ್ರೀ ಕಿಕೈಯಾವುಗಿದಾನೂ ೮

ರಾಗ ಶಂಕರಾಭರಣ. ಮಟ್ಟತಾಳ.

ವೀರರಾಮರಣವಿಮದವೇರಿಹುಂಕಾರೀಸುತಿರಲು ವಾರುಧಿಯೊಯನುತಶರವುಕುಶ ನವೋರೆಗಿಟ್ಟಾನೂ । ವಿರಾರಿಮುಂದರಿದುಬಾಣ । ಬೋರುಗುಡಿಸುತ್ತಿರಲು ಕಂಡುಬೇರೆಬೇರೆಕಡಿದುಬಿಸುಟ । ಧಾರುಣಯಲೀ ೧ ತುಂಡುಮಾಡಿಪರ್ವತಾಸ್ತ್ರ । ಮುಂಡೆಗಾಗಿಬಿಸುಟುತ್ತಿರಲು । ಖಂಡಬಾಯುಧಂಗಳಿಂದಖಂಡಿಶೀದನೂ ॥ ಪುಂಡರೀಕನಯನನೆಸಪತಂಡತಂಡದುರಗಶರವ್ಽದಿಂಡುದವದನಾಗಗರುಡಬಾಣವಿಂದಲದರನೂ ॥೨॥ ಭಾಪುಭಳಿರೆತರಳನೆನುತ । ಚಾಪವನ್ನುನೆಗಹಿಕೊಂಡು । ಭೂಪನೆಸದನಗ್ನಿಬಾಣಕೋಪದಿಂದಲೀ ॥ ತಾಪವಡರಿಜಗವನೆಲ್ಲರೂಪು ಬಾಣಸುಡುತಲಿರಲು । ಶ್ರೀಪತೀಯತನಯಜಲಧಿಮಾಪುಗೈಸಿದಾ ॥3॥ ಹಿಂದೆರಾವಾಣಾದಿಗಳನು । ಕೊಂ

ದುತಿರುಗಿಬರುವಬಾಣವಂಗೂಳಿಯದಂತೆರಣದಿಕುಂದಿ
ತೆಲ್ಲಾವ್ರೂ ॥ ಕಂದರಾಟವೋರಿಯೂಽಂತೆಂದು ರಾಮಕು
ಶನಕಂಣ । ಮುಂದೆನಿಲುವವೀರಸ್ಯಾರುಯಂ ದಿಗಾದ
ರೂ ॥೪॥ ಯಷ್ಟಬಾಣಂಗಳೆಲ್ಲನುಚ್ಚ್ವನೂ ರಾಗೆಧರಣಿ । ಚಿ
ಷ್ಟಿದಂತೆಕುಶಗಶೌರ್ಯಹೆಚ್ಚಿತಾಗಲೇ ॥ ಮುಷ್ಟರಂಗಳಿಂದ
ರಾಮ । ಹುಷ್ಟಸಂತೆಕಾದುತಿರಲು। ಕಿಟ್ಟಿನಂತೆಕುಶಗಶೌ
ರ್ಯಹೆಚ್ಚಿತಾಗಲೇ ೫

ರಾಗ ಕೇತಾರಗೌಳ. ಅಟತಾಳ.

ಮಕ್ಕಳೊಡನೆರಾಮಚಂದ್ರಾಗೆತಾ ಮನದಕ್ಕರುಂ
ಬೇನೆಂಬುದೇ । ಲೆಕ್ಕ ಪಬಗೆಯಿಂದಕುಶನೆಚ್ಚಶರಬಂ
ದುಪೊಕ್ಕೀತುವಡಲೊಳಗೇ ॥೧॥ ರಕ್ಕಸರಿಪುಬಸವ
ಳಿದು ಜೀಸಿಗೆಯ ರ್ಥುಳಕ್ಕೆಬಾಡಿದಲತೆಯಾ ॥ ದಿಕ್ಕಾನೆರ
ನದಿಂದಬಿದ್ದುಮೂರ್ಛಿತನಾಗಿಧಿಕ್ಕಾನೆಪವಡಿಸಿದಾ ೨
ಲೋಕನಾಯಕರಣದಲಿಮಲಗಿರೆಕಂಡುದಿಕ್ಪಾಲಾಕರು
ಮರುಗೇ ॥ ರಾಕೇಂದುಮಂಡಲವಿರದೆಬಾಡಿದ ರಾಹು
ನೋಕಿದಮುಖದಹಾಗೆ ॥೩॥ ಶ್ರೀಕಂಬುಕಂಠಾದೊಳೆ
ಸೆದುರಂಜಿಸುತಿಪ್ಪಯೇಕವಾಳಿಯ ಹಾರವಾ । ಆಕು
ಮಾರರುಕಂಡುಭರತಾ ಶತೃಘ್ನಾರಕಡೆಗೈತಂದಾರು ೪
ವಿಪರೀತವಿದನೋಡು ತಮ್ಮಮುತ್ತಿನಲಿಕಟ್ಟಹುದುಕೊ
ರಳದಂಡೇಯಾ । ಅಪರೂಪವಿದು ನಮ್ಮತಾಯಿಗಾಗು
ವದೆಂದುಅಪಹರಿಸಿದರೀರ್ವರೂ ॥೫॥ ತಪಶೀಗೆಕಾಣಿಕೆ
ಕೊಡಬೇಕೆಂದೆನುತಾಲಕಪಿಗಾಳನೀರ್ವರಾನೂ ॥ ನಿಪು
ಣಾರುಯಿವರೆಡೆಗೈಯ್ಯೆವಾರುತಿಕಂ ಡು ತಪ ಗುಟ್ಟ
ಗೈತಂದರೂ ೬

ರಾಗ ಆನಂದ. ಭೈರವಿ. ಅಟ ತಾಳ.

ಕಂಡೀರೆನೀವುಕಂಡಿರೇ । ಕಂಡಿರೆನೀವುಕುಶಲವರುಗಳಾ । ಹಿಂಡುಸೇನೆಗಳೆಲ್ಲಭಂಡುಮಾಡಿಸುದಾಕಂ ಡಿರೇ ನೀವುಕಂಡಿರೆ ॥ ಪ ॥ ರಣದೊಳಗೆಲ್ಲಾರಮಲಗೀಶಿಮತ್ತಾ । ಗುಣನಿಧಿರಾಮನಕೊರಳಿಂದಕಿತ್ತಾ । ಮಣಿಗಾಳಮುತ್ತೀನಹಾರಗಳನೂ । ಜೊತ್ತುಕ್ಷಣದೊಳಗೈದಿಬರುವರುನಮ್ಮತ್ತಾ ಕಂಡಿರೇನೀವುಕಂಡಿರೇ ॥೧॥ ಕೊಂಡುಪೋಗಲಿನಮ್ಮಸಲ್ಲಿಗೆಶೀತೆಕಂಡಾರೆರಕ್ಷಿಸುವಳುಜಗನ್ಮಾತೇ ॥ ಪುಂಡುಹುಡುಗರೊಳುಜಗಳಾಟವ್ಯಾಕೆ । ಭೂಮಂಡಲಾದೊಳುನಮ್ಮಕೊಲದಂತೆಜೋಕೇ ॥೨॥

ವ. ಯಿಂತೆಂದು ಹನುಮಜಾಂಬವರು ಪ್ರಸಂಗಿಸಲಾಗಿಅತ್ತಲಾಜಾನಕಿಯುಸುತರುಬರಲಿಲ್ಲವೆಂದು ಚಿಂತಿಸುತೀರ್ದಳದೆಂತೆನೇ

ರಾಗ ವಸಂತ. ಯೇಕತಾಳ.

ತರಳಲವನಕರತರುವೆನೆನುತ್ತಕುಶ । ತೆರಳಿಪೋದವನಿನ್ನುಬರಲಿಲ್ಲವ್ಯಾಕೇ ॥ ಯೇನಮಾಡಿದರೊಯಿಂನೆಂತುಕಾದಿದರೊ । ಸೂನುಗಳಳಿದಾರೊಕಾನನದೊಳಗೇ ॥ ತಮ್ಮನಕರತಾರೆಂದೆನ್ನಯಮಗನನ್ನು । ಸುಂಮ್ಮನೆಕಳುಹಿದೆನ್ಯೆಯ್ಯೆಯೋಕುಶನಾ ॥೧॥ ಜಿವಮೂರುವರುಷವಾಗವಬಾಲರೀರ್ವ್ವರು । ಕದನದೊಳೆಂಗಾಳೊಳೆಂತುಕಾದಿದರೋ ॥೨॥ ಸದನಾದೊಳಗೆಮುನಿಪಾನಿಲ್ಲಾದಪೇಳ್ವ್ಯಾದ । ಕುದರೆಬಂದುದುಲವನ್ಯಾಕೆಕಟ್ಟಿದನೋ ॥೩॥ ಬ್ಯಾಡನೆಂತೆಂಬರಿಲ್ಲಾಮಾತಾನುಕೇಳದೆ । ಕೇಡುಕಾಲವುತಪಸಿಕಾನನವೊ ॥ ಮಾಡುವದೇನಿನ್ನು

ಮತ್ತೊಬ್ಬರೆಸಗಿಲ್ಲ । ನೋಡಿಬರುವೆದಕ್ಕೆಸೂನುಗಳ
ನ್ನೂ

ದ್ವಿಪದೆ. ಬಳಲಿಜಾನಕಿಸುತರುಬಾರದ್ಯಾಕೆಂದು ।
ಹಲುಬಿದಳು ತನಯರಿಗೆಮನಸಿನಲಿನೊಂದೂ । ಪಾತಾಳ
ದಿಂದಮುನಿನಾಥಬರನ್ಯಾಕೇ । ಸೀತೆಹೀಗೆಂದುಮೂರ್ಛಿ
ತಳಾದಳಾಕೇ । ಯಂಬಸಮ ಯದಿಹನುಮಜಾಂಬವರ
ಬಿಗಿದೂ । ಕುಂಭಿಣಿಯೊಳೆಳಕೊಳುತಬರುತಿರಲುನಡೆ
ದೂ । ಯೇನಾದರೊ ತರಳರೆಂದುಚಿಂತಿಸು ವಾ । ತಾಯ
ವರಮುಂದಿರಿಸಿತೋರಿದರು ಕೈಮುಗಿದೂ । ತಾವುತಂ
ದವಡವೆಗಳವಿಸ್ತಾರದಿಂದಾ । ಪ್ರೀಯದಲಿತೋರಿದರುಜೀ
ರೆವಿಂಗಡಿಸೀ.

ರಾಗ ಸವುರಾಷ್ಟ್ರ. ಯೇಕತಾಳ.

ಮಂಗಾಳಮುಖಿ ಮರಾಮನಕಾಂತಸರವಂನು ನೋಡೆ
ಯಮ್ಮಾ್ರಸಮ । ರಾಂಗಣದೊಳುಬಿದ್ದಲಕ್ಷ್ಮುಮಣನಮ
ಕುಟವನೋಡೆಯಮ್ಮಾ್ರ ॥ ॥ ಕಂಗೊಳಿಸುವಭರತನ
ಕೈಯ್ಯಖಡ್ಗವನೋಡೆಯಮ್ಮಾ್ರಸಮ। ರಾಂಗಣದೊಳ
ಗೆಬಿದ್ದ ಶತೃಘ್ನನುಡಿದಾರನೋಡಯಮ್ಮಾ್ರ ॥೨॥ ಪೊಡ
ವಿಪಾಲರುಕೈಯೊಳ್ಳ ಹಿಡಿದ ಬಿಲ್ಬಾಣ ವನೋಡೆ ಯ
ಮ್ಮಾ್ರ । ಯಿಕ್ಕೊಕಡುಜಾಣಹನುಮಂತ್ರಾವಿಡು ಕುತಿ
ರುವಾದಕಂಡೆಯಮ್ಮಾ್ರ ॥೩॥ ಬಿಡದೆಸಂಗರದಿನಂ । ಮೊ
ಡನೆಕಾದಲುಬಂದಾ । ನೋಡೆಯಮ್ಮಾ್ರಯಿಕ್ಕೊ । ನಡು
ಗೂವಜಾಂಬವನ । ಹೆಡಗೈಯ್ಯಬಿಡಿದೂದನೋಡೆ ಯ
ಮ್ಮಾ್ರ ೪

ಮೃಗವುಹುಲಿಗಂಜಿಹಸಿದಿರುವಸಿಂಹನಬಾ

ಯ್ಗೆ । ಹೊಘುವಂತೆವೊದಲೆಚಿಂತಿಸುತಿಪ್ಪಜಾನಕಿ
ಯು। ರಘುವರನಕೊರಳಹಾರವಕಂಡುಶೋಕದಿಂಮು
ಗುದೆಜಾನಕಿನುಡಿದಳೊ

ರಾಗ ಯರಕಲಕಾಂಬೋಧಿ. ಯೇಕತಾಳ.

ಮಗನೇನೀನಿಂತುಮಾಳ್ಪರೇ ಅಯ್ಯೊ ಯೋಯನ್ನ।
ಮಗನೇನೀನಿಂತುಮಾಳ್ಪರೇ॥ಪ॥ ರಘುವಂಶಾಬ್ಧಿಪೂ
ರ್ಣಚಂದ್ರ। ಅಗಣೀತಭೋಗದೇವೇಂದ್ರ ಸುಗುಣಯ
ನ್ನಕಾಂತರಾಘವಾ । ಅಯ್ಯೊಯೋಮಗನೇಮಗನೇ
ನೀನಿಂತುಮಾಳ್ಪರೇ ॥೧॥ ತಂದೆರಾಮಚಂದ್ರಾನತಂ
ಮಂದಿರಬೇರೆಮುವ್ವರ । ಕೋದಿರಲ್ಲಾಕಾದಿರಣದೀ ।
ಅಯ್ಯೊಯೋಯನ್ನ॥೨॥ನಾನಾರಕುಲಕೆಅಭಿಮಾನಿಗಳಿ
ವರಿಗಿಂತಾಮಾನಭಂಗವೇನುಮಕ್ಕಳಿರಾ ಅಯ್ಯೊಯೋ
ಯನ್ನಮಗನೇನೀನಿಂತುಮಾಳ್ಪರೆ ॥೩॥ ಪಾತಾಳದಿಂದ
ಲಿಮುನಿನಾಥಬರಲಿಲ್ಲವಿನ್ನೂ । ಯಾತರವುಪಾಯವಿದಕೇ
ಅಯ್ಯೊಯೊಯಂನಾ ೪

ರಾಗ ನೀಲಾಂಬರಿ. ರೂಪಕತಾಳ.

ಸೀತೆಮಕ್ಕಳಿಗೆಂದಾಮಾತಕೇಳುತಮುನಿ । ನಾಥ
ವಾಲ್ಮೀಕಿಮುನಿಪಾತಾಳದಿಂದಾ ॥ ೧ ॥ ಬಂದಾಮುನಿ
ಯದೂರದಿಂದನೋಡುತಸೀತೆ ॥ ಕಂದರ್ಪಹಿತಪದ
ದ್ವಂದಾದೊಳೆರಗೀ ॥೨॥ ತಂದೆನೀವು ಯಿಲ್ಲಾದೆ ವಂ
ದೆದಿವಾಸಯನ್ನಾ । ಕಂದಮಾಡಿದಕೃತ್ಯಯಂದಳಾ
ಜನಾನೀ ॥೩॥ ಕರವಮುಗಿದು ಬಿದರಿರುವಬಾಲರಮು
ನಿ । ವರನುವ್ಮೃದಡವಿದಅತಿಪ್ರೀತಿಯಿಂದಾ ॥೪॥ ತರಣಿ
ಕುಲಾಜರೊಳುಸಂಗಾರವೆಂತಾಯ್ತುಯಾವ। ಪರಿಯಿಂ

ದಕೊಂದೀರಿಅರುಹಬಾಲಕರಿರಾ ... ೫

ರಾಗ ಮಧ್ಯಮಾವತಿ. ತ್ರಿಪುಡೆ.

ಕೇಳಿವಾಲ್ಮೀಕಿಮಹಾಮುನಿರಾಯಾ। ಕಾಳಗದೊಳುನಮ್ಮೊಳಾದವೃತ್ತಾಂತವಾ॥ರಾಮನೆಂಬವನೊಂದು ಶೀಮೆಯಧೊರೆಯಂತೆಪ್ರೇಮದಿಂದನುಜ ರುಮೂವರಂತೇ । ಆಮಖ ತುರಗ ಗೋಸುಗವೆ ನಂಮೊಡನೆಸಂ। ಗ್ರಾಮದೊಳಗೆಯುದ್ಧಮಾಡಿದಪರಿಯನೂ॥೧॥ ವಾನರ ಕುಲಕಭಿಮಾನಿಗಳಿವರಂತೆ । ಯೇನುಮಾಡಿದರೆ ಸಾವಿಲ್ಲಾವಂತೆ। ಯಿದುನಿಮ್ಮಚರಣಕೊಪ್ಪಿಸಬೇಕೆಂದೆನು ತಲೆಮಾನಭಂಗಾವಮಾಡಿಕಟ್ಟಿತಂದೆವುಸ್ವಾಮೀ ೨

ರಾಗ ಪಂತುವರಾಳಿ. ಅಟತಾಳ.

ಯೇನಾಮಾಡಲಿಮುನಿಯೇತಿಳಿಯದೆಂನಾ। ಸೂನುಗಳಿಂದಾಲಿಮಾನಬಂದೊದಗೀತೂ ॥೧॥ ವನದೊಳಗಿರಲುನಾ। ಧನುಜನೊಯ್ಯಲುಕೂಡೆ। ವನಜಾಕ್ಷಕಳುಹಲಾಕ್ಷಣದಲ್ಲಿ। ಹನುಮ ಲಂಕೆಗೆ ಹಾರಿಮುದ್ರೆಯುಂಗುರವಂನು । ವಿನಯದಿಂದಲಿತೋರಿದಾ । ಯಿಂತಾಗುಣವುಳ್ಳಾ ಕಪಿಗೆಭಂಗವಮಾಡಿದರಲ್ಲಾ ॥೨॥ ಹಿಂದೆನಾ ಭಲುಭಲು। ನೊಂದುಕೊಂಡವಳುನಾ। ಮುಂದಾದರು ನಾಲೇಸಾಗಿರುವೆಯಂದರೇ ಯಂನಾಕಂದಾರಿಂದಿಂ ತಾಯ್ತುವಾಲೆಭಾಗ್ಯವಕುಂದಿಲಕ್ಷಣ ಹೋಯಿತುನಾವಿಂದುನಂಬಿಕೊಂಡಿ ಹೆನುಹೀಗೆಂದುಲೇಸಾಯ್ತು ... ೩

ರಾಗ ಭೈರವಿ. ಜಂಪೆ.

ಅಂಮಕೇಳಂಜದಿರುಅಳಲಿಮಾಡುವದೇನುಬ್ರಹ್ಮಲಿಪಿತಪ್ಪುವದೆಬಾಯಾರಲ್ಯಾಕೆ ॥೧॥ ಸಾವುಹುಟ್ಟುವದೆಂ

ಬಸಂಸಾರವನುಜರಿಗೆಆರಿಗಾದರುವುಂಟು ಅವರವರಕ
ರ್ಮಾ ॥೨॥ ನಿತ್ಯವಲ್ಲವುಜೀವನೀರಜಾಂಬಕಿಕೇಳು ।
ಅತ್ತುಸಾವವರುಂಟೆಸತ್ತಪರಕೂಡೇ ॥೨॥ ಯಿಂದವರುನಾ
ಳೆನಾವೆಂದಿಗಾದರುನಾವು । ಜೊಂದುವದುಯಿಾಜೀವವಂ
ದೆನಿಮುಷಕ್ಕೆ ೩

ರಾಗ ಕಲ್ಯಾಣಿ. ತ್ರಿಪುಟೆತಾಳ.

ತಪ್ಪುಮಾಡಿದಿರಿನೀವೂ । ಕೇಳಿದರಿದ ಕರ್ಪೂಪ್ಪುಲೋ
ಕದಜನರೂ ।ಸ್ವಲ್ಪಬುದ್ಧಿಗಳಾಯ್ತುಅವರ ಕೊಂದಿರಿರಾ
ಮ । ನಪ್ಪನಲ್ಲಾವೆನಿಮ ಗೇಬಾಲಕರಿರಾ ॥ಪ॥ ಭೂಮಿ
ಯೊಳಗೆದುಷ್ಟರಾಸಂಹಾರಿಸಲುರಾಮಾವ ತಾರನಾಗೀ ।
ಪ್ರೇಮಾದಿದಶರಾಥನುಧರಾದಿಜನಿಸಿಶ್ರೀರಾಮವಿಷ್ಣುಜಾನ
ಕಿಲಕ್ಷ್ಮಿಶ್ರೀ ॥೧॥ ಶಾಲೆಯುಬಿಟ್ಟುದೂರಾಪೋಗದಿರೆಂದುಪೇ
ಳಲಿಲ್ಲಾವೆಕುವರಾ । ಕೇಳದೆಹೀನಕರ್ಮವ ಮಾಡಿದಿರಿನಿ
ಮ್ಮಚಾಳಿಗಿಂನೇನೆಂಬೆನೂಬಾಲಕರಿರಾ ॥೨॥ ತರಳನೀ
ಮರುಗಾದಿರೂ। ಆದರುನೋಡಿಬರುವೆಬಿದ್ದವರ್ಯಾರ್ಯಾ
ರೂ । ಅರಿಯಾದೆಬಂದಕೃತ್ಯಾಗಳೀದುದೋಷಕ್ಕೆಪ
ರಿಹಾರವುಂಟುಮುಂದೇಕೇಳೆಲೆಹಂದೇ ... ೩

ವ. ಯಿಂತೆಂದು ಜಾನಕಿಯುಸಂತೈಸಿಮುನಿಯು ಕು
ಶಲವರಂಕರಕೊಳ್ಳುತ ಬಂದು ಶ್ರೀರಾಮನಂತೋರಿ ಕೈ
ಯಿಂದು ಹೇಳಲು ಮುನಿಕಂಡನದೆಂತೆನೇ

ರಾಗ ಕೇತಾರಗೌಳ. ಅಟತಾಳ.

ಯತ್ತನೋಡಿದರು ರಾಮನವುಂದಿಕುದರಾನೆ । ಸತ್ತ
ಹೆಣಗಳರಾಶೀ । ಛತ್ರಚಾಮರವಾದ್ಯಕೊಂಬುತಂಮಟೆ
ಭೇರಿಸುತ್ತಮುತ್ತೆಡಬಲಡೀ॥೧॥ ಹಸ್ತದೊಳಗೆಬಿಲ್ಲುಬಾಣ

ಬಿಡಿದೀ ಹರಿತ್ತದೊೞ್ ಕುಳಿಯನೇಲೇ । ಮುತ್ತೂವನೊ
ಗಾಳು ಕವಿವರಾಮನವುನಿಪ್ರೊತ್ತಾ ಮನದನುಕಂಡಾ ೨
ಂದೀ ದಮುಖಕಾಂತಿ ಮೈಹೊಳವದಸಾನಂದಸಂಧರ್ಯ
ರೂಪಾ । ತೊಡೆ ಕೈಕಾಲ್ಗಳನೋಡಿಕುಂದಾಣದಂತೆತಾ
ಸದೀ ಪ್ರರಣದೊಳಗೇ ॥೩॥ ಚಂದಚಂದದಿಮ ಣ ಮ
ಟಸಾರಂಗಳಿಂತಿಂದದಿಂದೆಸೆದಿರು ವಾ।ವೆಂದಾಗಿಮಲಗೀ
ಭರತಶತ್ರುಘ್ನ ರಮುಂದೆಲಕ್ಷ್ಮಣರಕಂಡಾ ೪

ರಾಗ ಸವುರಾಷ್ಟ್ರ. ತ್ರಿಪುಡೆತಾಳ.

ರಣದೊಳಗೆಸಾಲಾಗಿಮಲಗಿಹ। ಹೆಣಗಳನುಕಾಣು
ಮುನಿಪತಿಮನಸಿನಲಿನೆನಸಿದನು ನಾರಾಯಣ ನಪದ
ವ ॥೧॥ ಯಿಾಕ್ಷಿಸಿದಭೂಪಾಲಸೇನೆಯ । ಪ್ರೋಕ್ಷಿಸಿದ
ಮಂಡಲುದಕವರಾಕ್ಷಸಾಂತಕನೆದ್ದು ಸುರಪನವೃಕ್ಷ
ದಂತೇ ॥೨॥ ನಿದ್ದೆಯೊಳಿಮಲಗಿರುವಲಕ್ಷ್ಮಣ । ನೆದ್ದನಾಸ
ರುಯುದಲಿಭರತನು । ಯಿದ್ದಸೈನ್ಯವುಸಹಿತಕುಣಿವುತೀ
ರ್ದದಲ್ಲೀ ೩

ರಾಗ ರೇಗುಪ್ತಿ. ಆದಿತಾಳ.

ಜಯಜಯಲೋಕಪಾಲಕಾ । ವಾಲ್ಮೀಕಿಮುನಿಜ
ಯಜಯಲೋಕಪಾಲಕಾ॥ ಸೂರ್ಯಾಸಮಾಕೋಟಿಕಾ
ಮಾ। ದಯಾಂಬುಧಿಶೇವನೆ। ಧೈರ್ಯಮಾನಸುಜನಪ
ಪಾಲಾವಾಲ್ಮೀಕಿಮಹಾ ॥೧॥ ಸಕಲಶಾಸ್ತ್ರನಿಗಮಾಗ
ಮಪೂರಿತ । ಮುಕುತಿದಾಯಕಾಶ್ರೀವರದಜಯಜಯ
ಲೋಕಪಾಲಕಾ ೨

ರಾಗ ದೇಶಿ. ಅಟತಾಳ.

ಕಂದರಿವರ್ಯಾರುಮುನಿಯೇ । ಯಿವರತಂದೆತಾಯಿ

ಗಳ್ಯಾರುಮುನಿಯೇ ॥ ಮಂದಿರವೆಡೆಯಲ್ಲಿಮುನಿಯೇ ಯಿವರು । ನಿಂದವೂರ್ಯಾವುದುಮುನಿಯೇ ॥೧॥ ಬಿಲ್ಲ ವಿದ್ಯಾಂಗಾಳಮುನಿಯೇ। ಯಿವರೆಲ್ಲಿಕಲಿತರ್ರೈಯ್ಯಾಮುನಿಯೇ । ಬಂದುದ್ಯಾತಕಿಲ್ಲಿಮುನಿಯೇ । ನಮ್ಮಕೊಂದಕಾರಣವೇನುಮುನಿಯೇ ೨

ರಾಗ ಭೈರವಿ. ಜಂಪೆತಾಳ.

ಭಾನುವಂಶಜಕೇಳುಬಹಳಮಾತುಗಳ್ಯಾಕೆ । ಯಿನಡತೆಮೊದಲುಂಟೆಯಿರಾಜ್ಯದೊಳಗೇ ॥೧॥ ತಂದೆಮಕ್ಕಳುತಾವುತಂಮೊಳಗೆಕಾದುವದು । ಹಿಂದೆಕೇಳಿದುದಿಲ್ಲಹೀಗೆಂಬವಾರ್ತೆ ॥೨॥ ದಾನವಂತಕಕೇಳುಆಮಾತುನಿನಗ್ಯಾಕೆ।ಯೇನಾಗಬೇಕಿವರುಜಾನಕಿಯಸುತರೂ ೩ ಅರಿಯದವನೇನೀನು ಆಯಿತಾಯಿತುಸಾಕು । ಬರಿಯಮಾತುಗಳೆಮ್ಮಮರುಳುಮಾಡುವದೂ ॥೩॥ ಮಕ್ಕಳಿವರೆಂತೆಂಬಮಾತಕೇಳುತಲಾಗಆಕ್ಷಣವೆಕೇಳಿದನುಲಕ್ಷ್ಮಣನಕೂಡೇ ೪

ರಾಗ ಕೇತಾರಗೌಳ. ಅಟತಾಳ.

ಯೇನಯ್ಯಾತಂಮಾಯೇನಯ್ಯಾ । ಯೇನೈಯಾತಮ್ಮ ಋಷಿಗಾಳಮಾತೂ ಜಾನಕಿಮಕ್ಕಳಪಡದಳಿನ್ನೆಂತು ಯೇನೈಯತಂಮುಯೇನೈಯಾ ॥ ೧ ॥ ಜನರಪವಾದ ಬಂದು ದುಸೀತೆಗೆಂದೂ । ವನದೊಳಗೊಬ್ಬಳಬಿಟ್ಟುಬಾರೆಂದೂ । ನಿನಗೆಪೇಳಿದಮೇಲೆಯೆನಾಯಿತೆಂದೂ ।ಯನಗೆವಿಸ್ತರಿಸಲಿಲ್ಲವೇನೀಮುಂದೂ ೨ ಕಾಡಿನೊಳಿರುವರೆಮನೆಯಲ್ಲಿಬಂತೂ । ರೂಢಿಯೊಳಗೆಯಿಷ್ಟುದಿನವೆಲ್ಲಿಸಂತು । ನೋಡಿದರತಿಮುದ್ದುಸೋಬ

ಗೀನೊಳೆಂತೊ । ಜೋಡುಮಕ್ಕಳಸೀತೆಪಡದಳೆಂ
ನೆಂತೊ॥೩॥ಅಂಣನಿನ್ನಪ್ರಾಣೆಯಿಂದಾಲಿಸಾನೊ।ಮಿಂ
ಣನೆರಥವನೇರಿಸಿಸೀತೆಯನ್ನೊಳ । ರಂಣ್ಯದೊಳೊ
ಬ್ಬಳ ಬಿಟ್ಟು ಸಾಬಂದೇ। ಬಂಗೇಸಲರಿಯದಾದೆನು
ಅದರವುಂದೆಬಿಂನಹಸ್ವಾಮಿ ...

ವ. ಇಂತೆಂದು ಲಕ್ಷ್ಮಣ ನುಡಿಯಲಾಗಿ ವಾಲ್ಮೀಕಿ
ಮುನೀಶ್ವರರು ರಾಘವ ನೋಡನೆ ಯೇನೆಂನು ತ್ತಿ
ರ್ದ ರದೆಂತೆನೇ

ರಾಗ ಕೇತಾರಗೌಳ. ಅಟತಾಳ.

ವಂದೇಮನಸಲ್ಲಾ ರಾಘವನಿನಗೆ। ಹಿಂದಾಣ ದಿನಿಸಲ್ಲಾ।
ಕಂಡವಾರಮಾತಕೇಳಿಹೆಂಡಾತೀಯಬಿಡುವಾರೆ।ಕಂಡು
ಕಂಡುತ್ರಿಳಿದುತ್ರಿಳಿದುಪುಂಡಾಟವಮಾಳ್ಪರೆ। ಹಿಂಡುಧೊ
ರೆಗಳಿದರಕೇಳಿಕಂಡುತೋಷಬಡುವರೇ। ವಂದೇಮನ
ಸಲ್ಲಾ ॥೧॥ ಕಾಡಿನೊಳಗಳುವಸೀತೆಯನ್ನವಡಂಬಡಿ
ಸಿದೆ।ಬ್ಯಾಡದುಃಖವೆಂದುಧೈರ್ಯವೇಳಿತೋಷಬಡಿಸಿದೆ।
ಮಾಡಿಪರ್ಣಶಾಲೆಯನ್ನುಚೀರವಿಂಗಡಿಸಿದೆ । ಜೋಡು
ಮಕ್ಕಳಂನುಪಡದಳಿಷ್ಟುದಿವಸಸಲಹಿದೆ ॥೨॥ ಕುಶಲವ
ರೆಂದಿಬ್ಬರೀಗೆಯಸವಪೆಸರನಿಡಿಸಿದೇ । ಅಸಮವಿದ್ಯಾಂ
ಗಾಳಸಾನುಕುಶಲದಿಂದಕಲಿಸಿದೇ । ಅಸಮಬಿಲ್ಲುವಿ
ದ್ಯಾಂಗಾಳಯೆಸವಬಗೆಯತೋರಿದೆ। ಅಸಮವೈರಿನೀರಕ್ಷಿ
ಸುನಿಂನವುಂದೆನಿಲಿಸಿದೇ ೩

ರಾಗ ಕೇತಾರಗೌಳ. ಅಟತಾಳ.

ಓದಿದರುಮಕ್ಕಳೋದಿದರುಮುನಿಯ ಪಾದಕ್ಕೆರಗಿ

ಭಕ್ತಿಯಿಂದವೇದಶಾಸ್ತ್ರ ಪಾರಾಣವ ನೋದಿದರು ಮಕ್ಕಳೋದಿದರೂ ॥ಪ॥ ತುಂಬುರನಾರದಯಕ್ಷ ಸಂಗೀತಸಾಹಿತ್ಯವೀಣೆ। ಅಂಬುಜನಾಭನಮುಂದೆ ಆರ್ತಿಯಿಂದಲೀ॥ ಕುಂಭಿನಿಜಾತೆಯಮಕ್ಕಳೆಂಬ ಬಿರಿದುಪೊಗಳುತಿರಲು ಸಂಭ್ರಮ ವಕೇಳಿರಾಮ ಸಂತೋಷಮಾಡಿದಾ ॥೧॥ ಬಂಣೇಸಿಬಂಣೇಸಿಸ್ವರಕಿನ್ನರಿಯವಿನಾಟೂವಂತ।ಸಂಣಚಿರಳ ಸೊಬಗಪೋಲ್ವದಾ । ಪುಣ್ಯವಂತೆಸೀತೆಯಂದುಮನಬೋಳ್ ಹರುಷವಂನುತಾಳಿ। ಚಿಂಣರಂನುತೆಗೆದುತೆಗೆದು ಮುದ್ದು ಮಾಡುತಾರಾಮಾ ೨

ರಾಗ ಮುಖಾರಿ. ಆಟತಾಳ.

ವಾಲ್ಮೀಕಿಮುನಿನಿಮಗೆಶರಣುಶರಣೂ । ಗುರುರಾಯನಿಂಮಂತಗುಣನಿಧಿಗಳ್ಯಾರಿನ್ನೂ। ಕರವಮುಗಿವೆ ನ್ನಿಮಗೆ ಕರುಣಸೆನಗೇ ॥೧॥ ಭಾನುಕುಲದಲಿಜನಿಸಿಕ್ಷಿಣಣನಾಗಲುಕಂಡು । ಅನುಜರೆಲ್ಲರಸಹಿತಗುಣವಿಪಾಲಿಸಿದೇತರಳೆಜಾನಕೀಸಹಿತತೆರಳುವದುಪುರಕೆಂದುಬಳಿಕಯಾಗವಮುಗಿಸಿಬರಬಸುದುನೀವೂ ೨

ದ್ವಿ. ರಾಘವನನುಡಿಕೇಳಿಹಾಗಾಗಲೆಂದೂ।ಬೇಗದಲಿ ವಾಲ್ಮೀಕಿಮುನಿಪ ನಸು ನಗುತಾ ಶಿಷ್ಯರ ನುಕಳುಹಿದನು ಶೀಘ್ರದೊಳಗಂದೂ । ಆಶ್ರಮದಸೀತೆಯನು ಕರತನ್ನಿರೆಂದೂ । ಪೋದರಾಕ್ಷಣದಲ್ಲಿಕಂಡುಜಾನಕಿಯಾ । ಪಾದದಪ್ಪಣೆಯಾಯ್ತುನಿಮಗೆ ವಾಲ್ಮೀಕೀಯಾ । ತೆರಳಬೇಕೆನಲವರವಾರ್ತೆಯನುಕೇಳೀ । ಹರಿಲೋಚನೆ ಯುಬಹುಸ ರುಷವನುತಾಳೀ । ಬಂದಳಾಕ್ಷಣಸೀತೆ ಕಡುತವಕದಿಂದಾ ಮಂದಗಾಮಿನಿಗೆಕ್ಯಮುಗಿಯೆ ಜನ

ವೃಂದಾ । ಧರಣಿಜಾತೆಯನೋಡಿ ಆಕ್ಷಣವೆ ರಾಮನೂ। ಹರುಷದಿಂದಿರುತಿರ್ದ ಮನದಿನಿಸ್ಸೀಮನೂ ೭

ರಾಗ ಕಲ್ಯಾಣಿ. ತ್ರಿಪುಡೆ.

ಪತಿಯನೋಡಿದಳು ಸೀತೆ ಮೂಜಗದಿಶ್ವ । ಪತಿಯನೋಡಿದ ಳುಸೀತೆಕ್ಷಿತಿಯಸಜ್ಜನರಿಗೆ । ಗತಿಯ ಪಾಲಿಪ ಪಶು । ಪತಿಯುಪ್ರಿಯನಕಟಿ। ಪತಿಯುಸೇವಿಪ ರಘು। ಪತಿಯನೋಡಿ ದಳುಸೀತೆಮೂಜಗ ವಿಶ್ವಪತಿ ಯ ನೋಡಿದಳು ಸೀತೆ ॥೧॥ ಯಡಬಾಲದೊಳಗಿರ್ವರೂ ತಂಸನುಜಾರು । ತೊಡೆಯೊಳಿರ್ವರುಬಾಲರೂ । ಕಡು ಹನುಮ ಜಾಂಬವರು ಜಾಣಸಹಿತ ಮುನಿಪತಿ ವಾಲ್ಮೀಕಿಯ ಮಹಾಬಲದಿರಂಜಿಪ ರಘುಪತಿಯನೋಡಿದಳು ಸೀತೆ

ವಾ. ರಥವೇರಿ ರಾಮಚಂದ್ರನು ಜಾನಕಿಯು ಸಹಿತ । ಅತಿಶಯದೊಳೇರಿದರು ಮುನಿಯರಂದಣಗಳಲಿ । ಪೃಥುವಿಜೆಯ ತರಳರಿರ್ವರು ಆನೆಸಿರಗಳಲಿ ಕುಳಿತು ಬರುತ್ತಿರಲು ಬಳಿಕಾ ॥ ಜತೆಯಾಗಿ ವಾಹನಂಗಳನೇರಿ ಬರು ತಮುನಿ। ಪತಿಯು ಪಲ್ಲಕ್ಕಿಯಲಿ ಕುಳ್ಳಿರಲು ಬಳಿಕ ರಘು । ಪತಿಯು ಸಂತೋಷದಿಂ ತನ್ನನುಜರೊಡಗೂಡಿ ನಿಜಪುರಕೆ ಬರುತಿರ್ದನೂ

ರಾಗ ಬಿಹಾಗ್. ಆದಿತಾಳ.

ಪುರಕೆತೆರಳಿದನು ರಾಮೂಸಂತೋಷದಿಂದಾ । ಪುರಕೆತೆರಳಿದನು ರಾಮೂ ॥ಪ॥ ಭರತಶತೃಘ್ನರು ವರಜಾಂಬವಾದಿಗಳ್ । ತರಳರಿರ್ವರು ಸಹಿತ ; ತೆರಳಿದರಾಕ್ಷಣ । ಪುರಕೆತೆರಳಿದನು ರಾಮೂ॥೧॥ಕೊಂಬು ಹೆಗ್ಗಾಳೆ ವಾದ್ಯತಂಭೇರಿಭೇರಿಚತು । ರಂಬುಧಿಯ ಮಧ್ಯದಿ ತುಂಬೀ ತುರಘ ಸಾವ್ರಾ ॥೨ ಕೇರಿಕೇರಿಯ ಹೆಂಗೊಳೊರಂತೆ ಪಾಡುತ್ತವಿ

ಸ್ತೋತ್ರದಿಂದಲಿಮಂಗಳಾರತಿಯಯೆತ್ತಿದರುಪುರಕೆ

ರಾಗ ಧವಳ. ಆದಿತಾಳ.

ಕಡಹದಕನಕಮಂಟಪದೀ। ಪೊಡವೀಶನಿರಲುಸಂಭ್ರಮ
ದೀಬಿಡವೆಕುಶನುತಂದೆತೊಡೆಯೊಳೊಪ್ಪಿದಲು। ಝುಡಿಃ
ವಾದ್ಯಗಳುವೃಗ್ಗಡಿಸಿ। ಕೂಡಿರಲುಬೆಡಗಿನಿರಾಮಗುವ
ಡದಿಶೀತೆಗುಕಡುಬೆಡಗಿನಾರತಿಯಬೇಳಗಿರಶ್ಶೋ ಭಾನೆ
ಮಂಜುಳಪುರವೇಣಿಯರು। ಕುಂಜರನಿಭಗಮನೆಯರು
ಮಂಜುಳಹರಿವಾಣದೊಳಳವಟ್ಟು। ರಂಜಿಪಅಕ್ಷತೆಘನ
ಯೊಳಗಿಟ್ಟು। ಕಂಜನಾಭನಿಗಪರಂಜಿಯರರಗಿಣಿ। ಪಂ
ಜರದಾರತಿಯಾ ಬೇಳಾಗೀರೆ ಶೋಭಾನೇ॥ ॥ ದಾರು
ಣಿಗತಿಚದುರೆಯರೂ। ನೀರಜದಳನಯನೆಯರೂ
ಮೂಜಗದಲಿವುದ್ಧಾರರಾಗೆನುತದಾರುಣಿಯೊಳಗ ತ್ರಿಶೂ
ರರಾಗೆನುತ। ಸಾರಿಯರಿಂತುವೈಯ್ಯಾರದಿಹರಸುತ್ತ।
ವೀರಕುಶಗುಬಹುಧೀರಲವಗುಸಹಾವೋರುವೆಯಾ ರತಿ
ಯಾಬೇಳಾಗೀರೆ ಶೋಭಾನೇ

ಕುಶಲವರಕಾಳಗಸಂಪೂರ್ಣ.

THE

KUSHALAVARA KALAGA.

ಪಂಚವಟಿ ರಾಮಾಯಣದ

ಉತ್ತರ ಕಾಂಡದೊಳಗಣ

ಕುಶಲವರ ಕಾಳಗ.

ಯಕ್ಷಗಾನ.

ಹೊಳಕಲ್ಲು ನರಸಿಂಹಯ್ಯನವರಿಂದ
ಪರಿಷ್ಕರಿಸಲ್ಪಟ್ಟಿಧೆ.

(Frist Edition. ೧ನೇ ಛಾಪೆ.)

ಬೆಂಗಳೂರು.

ಹೊಳೆಕಲ್ಲು ನರಸಿಂಹಯ್ಯನವರ
ವಿಚಾರ ದರ್ಪಣ ಮುದ್ರಾಕ್ಷರ ಶಾಲೆಯಲ್ಲಿ
ಮುದ್ರಿಸಲ್ಪಟ್ಟು ಪ್ರಕಟಿಸಲ್ಪಟ್ಟಿತು.

ಸನ್ ೧೮೭೦.

1870.